# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶನಿವಾರ, ಮೇ 22, 2021

ಸಂಪುಟ : 48 ಸಂಚಿಕೆ : 08 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ :4 ರೂ : 4.00 www.janathavani.com janathavani@mac.com


## ಜೂನ್ 7ರವರೆಗೆ ಲಾಕ್‌ಡೌನ್ ವಿಸ್ತರಣೆ

ಬೆಂಗಳೂರು, ಮೇ 21 – ರಾಜ್ಯದಲ್ಲಿ ವಿಧಿಸಲಾಗಿರುವ ಲಾಕ್‌ಡೌನ್ ಅನ್ನು ಇನ್ನೂ ಹದಿನಾಲ್ಕು ದಿನಗಳ ಕಾಲ ವಿಸ್ತರಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಇದರಿಂದಾಗಿ ಮೇ 24ಕ್ಕೆ ಅಂತ್ಯಗೊಳ್ಳಬೇಕಿದ್ದ ಲಾಕ್‌ಡೌನ್, ಜೂನ್ 7ರವರೆಗೆ ವಿಸ್ತರಣೆಯಾಗಿದೆ.



ರಾಜ್ಯದಲ್ಲಿ ಮೇ 10ರಿಂದಲೇ ಕಠಿಣ ನಿರ್ಬಂಧಗಳು ಜಾರಿಯಲ್ಲಿವೆ. ಮೇ 24ಕ್ಕೆ ಲಾಕ್‌ಡೌನ್ ಅಂತ್ಯಗೊಳ್ಳಬೇಕಿತ್ತಾದರೂ, ಅದನ್ನು ವಿಸ್ತರಿಸುವ ಎಲ್ಲಾ ಸೂಚನೆಗಳನ್ನು ಸರ್ಕಾರದ ಸಚಿವರು ನೀಡಿದ್ದರು. ಕೊವಿಡ್ ಕುರಿತ ಪರಿಣಿತರ ಸಮಿತಿ ಸಹ, ಲಾಕ್‌ಡೌನ್ ವಿಸ್ತರಣೆ ಕುರಿತು ಸಲಹೆ ನೀಡಿತ್ತು.

ಹಿರಿಯ ಸಚಿವರು, ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಇತರರ ಜೊತೆ ಚರ್ಚಿಸಿದ ನಂತರ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಲಾಕ್‌ಡೌನ್ ವಿಸ್ತರಿಸುವ ಘೋಷಣೆ ಮಾಡಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿರುವ ಯಡಿಯೂರಪ್ಪ, ಪರಿಣಿತರ ಸಲಹೆಯಂತೆ ಮೇ 24ರವರೆಗೆ ಇದ್ದ ಕಠಿಣ ನಿರ್ಬಂಧಗಳನ್ನು, ಜೂನ್ 7ರವರೆಗೆ ವಿಸ್ತರಿಸಲಾಗಿದೆ ಎಂದು ಹೇಳಿದ್ದಾರೆ.

ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಹಾಗೂ ಪರಿಣಿತರ ಸಲಹೆಯಂತೆ ಲಾಕ್‌ಡೌನ್ ವಿಸ್ತರಿಸಲಾಗಿದೆ. ಸಾರ್ವಜನಿಕರು ಸಹಕರಿಸಬೇಕು ಎಂದವರು ಮನವಿ ಮಾಡಿಕೊಂಡಿದ್ದಾರೆ.

ಸಾರ್ವಜನಿಕ ಸ್ಥಳದಲ್ಲಿ ಜನರು ಮಾಸ್ಕ್ ಧರಿಸಬೇಕು, ಸಾಮಾಜಿಕ ಅಂತರ ಕಾಯ್ದು ಕೊಳ್ಳಬೇಕು ಹಾಗೂ ಸ್ವಚ್ಛತೆ ಕ್ರಮಗಳನ್ನು ಅನುಸರಿಸಬೇಕು ಎಂದವರು ಹೇಳಿದ್ದಾರೆ.

ಈಗಿರುವ ಲಾಕ್‌ಡೌನ್ ಯಥಾಸ್ಥಿತಿಯಲ್ಲಿ ಮುಂದುವರೆಯುತ್ತದೆ. ಲಾಕ್‌ಡೌನ್ ನಿಯಮಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದಿರುವ ಯಡಿಯೂರಪ್ಪ, ಹತ್ತು ಗಂಟೆಯ ನಂತರವೂ ಜನರು ಅಲೆದಾಡಬಾರದು. 9.45ರ ವೇಳೆಗೆ ಮನೆ ಕಡೆ ಹೊರಡಬೇಕು. ಇಲ್ಲವಾದರೆ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು ಎಂದವರು ತಿಳಿಸಿದ್ದಾರೆ. ಸರ್ಕಾರಿ ನೌಕರರ ವೇತನ ಕಡಿತ ಮಾಡುವ ಬಗ್ಗೆ ಸರ್ಕಾರ ಯಾವುದೇ ಯೋಚನೆ ಮಾಡಿಲ್ಲ ಎಂದವರು ಮತ್ತೊಂದು ಪ್ರಶ್ನೆಗೆ ಉತ್ತರಿಸಿದ್ದಾರೆ.

ಬ್ಲಾಕ್ ಫಂಗಸ್ ಕುರಿತ ಪ್ರಶ್ನೆಯೊಂದಕ್ಕೆ ಉತ್ತರಿಸಿರುವ ಅವರು, ಜಿಲ್ಲಾ ಆಸ್ಪತ್ರೆಗಳಲ್ಲಿ ಸೋಂಕಿತರಿಗೆ ಉಚಿತವಾಗಿ ಚಿಕಿತ್ಸೆ ನೀಡಲಾಗುವುದು ಎಂದಿದ್ದಾರೆ.

ಬಡವರು ಈ ರೋಗದ ಚಿಕಿತ್ಸಾ ವೆಚ್ಚ ಭರಿಸಲಾಗದು. ಹೀಗಾಗಿ ಬ್ಲಾಕ್ ಫಂಗಸ್‌ಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ನೀಡಲಾಗುವುದು ಎಂದು ಯಡಿಯೂರಪ್ಪ ತಿಳಿಸಿದ್ದಾರೆ.

ಕೊರೊನಾ ಪ್ರಕರಣಗಳು ನಿಯಂತ್ರಣಕ್ಕೆ ಬಾರದ ಕಾರಣ ರಾಜ್ಯ ಸರ್ಕಾರ ಮೇ 10ರಂದು ಕಠಿಣ ನಿರ್ಬಂಧಗಳನ್ನು ವಿಧಿಸಿತ್ತು. ಈ ಲಾಕ್‌ಡೌನ್ ವಿಸ್ತರಿಸುವಂತೆ ಹಲವಾರು ಸಚಿವರು, ವಿಶೇಷವಾಗಿ ಆರೋಗ್ಯ ಸಚಿವ ಡಾ. ಸುಧಾಕರ್ ಒತ್ತಾಯಿಸಿದ್ದರು.

# ಹೋಂ ಐಸೋಲೇಷನ್ ನಿಲ್ಲಿಸಿ

## ಸೋಂಕಿತರನ್ನು ಕಾಳಜಿ ಕೇಂದ್ರಗಳಿಗೆ ರವಾನಿಸಲು ಆರೋಗ್ಯ ಸಚಿವ ಸುಧಾಕರ್ ಸೂಚನೆ

ದಾವಣಗೆರೆ, ಮೇ 21 - ಸೋಂಕಿತರನ್ನು ಕೋವಿಡ್ ಕಾಳಜಿ ಕೇಂದ್ರಗಳಲ್ಲಿ ಇರಿಸದೇ ಇರುವುದೇ ಸೋಂಕು ಹರಡಲು ಕಾರಣವಾಗುತ್ತಿದೆ ಎಂದು ಹೇಳಿರುವ ಆರೋಗ್ಯ ಸಚಿವ ಡಾ. ಸುಧಾಕರ್, ಜಿಲ್ಲೆಯಲ್ಲಿರುವ ಎಲ್ಲಾ ಸೋಂಕಿತರನ್ನು ಕಾಳಜಿ ಕೇಂದ್ರಗಳಿಗೆ ರವಾನಿಸುವಂತೆ ಸೂಚಿಸಿದ್ದಾರೆ.

ಜಿಲ್ಲೆಯಲ್ಲಿನ ಕೋವಿಡ್ ಸ್ಥಿತಿಗತಿ ಕುರಿತಂತೆ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಶುಕ್ರವಾರ ಏರ್ಪಡಿಸಿದ್ದ ಪರಿಶೀಲನಾ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪ್ರತಿಯೊಂದು ಪ್ರಾಥಮಿಕ ಆರೋಗ್ಯ ಕೇಂದ್ರದ ಹಂತದಲ್ಲಿ ವಸತಿ ಶಾಲೆಯೊಂದನ್ನು ಕೋವಿಡ್ ಕಾಳಜಿ ಕೇಂದ್ರವಾಗಿ ಪರಿವರ್ತಿಸಬೇಕು. ಸೋಂಕಿತರನ್ನು ಇಲ್ಲಿಗೆ ದಾಖಲಿಸಿ, ಐದು ಗಂಟೆ ಒಳಗೆ ವೈದ್ಯಕೀಯ ಕಿಟ್ ಕೊಡಬೇಕು ಎಂದು ತಿಳಿಸಿದರು.

ಮನೆಯಲ್ಲಿ ಪ್ರತ್ಯೇಕವಾಗಿರುವವರ ಆಕ್ಸಿಜನ್ ಸ್ಯಾಚುರೇಷನ್ ದಾಖಲೆ ಸಮರ್ಪಕವಾಗಿ ಆಗುತ್ತಿಲ್ಲ. ಇದು ಆರೋಗ್ಯ ಸಮಸ್ಯೆಗೆ ಕಾರಣವಾಗುತ್ತಿದೆ ಎಂದ ಅವರು, ಎಲ್ಲಾ ರೋಗಿಗಳನ್ನು ತ್ವರಿತವಾಗಿ ಕೇಂದ್ರಗಳಿಗೆ ಕಳಿಸುವಂತೆ ಜಿಲ್ಲಾಡಳಿತಕ್ಕೆ ಸೂಚನೆ ನೀಡಿದರು.

ಈ ಬಗ್ಗೆ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಕೋವಿಡ್ ಕಾಳಜಿ ಕೇಂದ್ರಗಳಲ್ಲಿ ದಾಖಲಿಸುವುದನ್ನು ಕಡ್ಡಾಯಗೊಳಿಸಬೇಕು. ಇಲ್ಲದಿದ್ದರೆ ಸೋಂಕು ತಡೆಯಲು ಸಾಧ್ಯವಾಗುವುದಿಲ್ಲ. ಇದಕ್ಕೆ ಅಗತ್ಯವಾದರೆ ಪೊಲೀಸರ ನೆರವು ಪಡೆಯಬೇಕು ಎಂದು ಸೂಚಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪರಿಷತ್ ಸದಸ್ಯ ಭೋಜೇಗೌಡ, ಸೋಂಕಿತರ ಪ್ರಾಥಮಿಕ ಹಾಗೂ ದ್ವಿತೀಯ ಸಂಪರ್ಕಿತರನ್ನು ಕಳೆದ ಬಾರಿಯಂತೆ ಗುರುತಿಸದೇ ಇರುವುದೇ ಸಮಸ್ಯೆ ಉಲ್ಬಣಿಸಲು ಕಾರಣವಾಗಿದೆ ಎಂದರು.




ಆರೋಗ್ಯ ಸಚಿವ ಡಾ. ಸುಧಾಕರ್ ಶುಕ್ರವಾರ ದಾವಣಗೆರೆ ಜಿಲ್ಲಾ ಚಿಗಟೇರಿ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಿ, ಪತ್ರಕರ್ತರೊಂದಿಗೆ ಮಾತನಾಡಿದರು.

### ಜಿಲ್ಲೆಯಲ್ಲಿ ಕೊರೊನಾ ನಿಯಂತ್ರಣಕ್ಕೆ ಸುಧಾಕರ್ ಸೂಚನೆಗಳು

**ಎಲ್ಲಾ ಸೋಂಕಿತರನ್ನು ಕೊರೊನಾ ಕಾಳಜಿ ಕೇಂದ್ರಗಳಿಗೆ ರವಾನಿಸಬೇಕು. ತಾಲ್ಲೂಕು ಆಸ್ಪತ್ರೆಯಲ್ಲಿ 50 ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ 30 ಬೆಡ್‌ಗಳಿರುವಂತೆ ನೋಡಿಕೊಳ್ಳಬೇಕು. 3 ದಿನಗಳಲ್ಲಿ ಎಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲಿ ವೆಂಟಿಲೇಟರ್ ಕಾರ್ಯ ನಿರ್ವಹಿಸಬೇಕು. ಖಾಸಗಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳ ಶೇ.75ರಷ್ಟು ಸೀಟುಗಳನ್ನು ಜಿಲ್ಲಾಡಳಿತ ಪಡೆಯಬೇಕು. ಜಿಲ್ಲೆಯಲ್ಲಿರುವ 15-20 ಬ್ಲಾಕ್ ಫಂಗಸ್ ರೋಗಿಗಳಿಗೆ ಔಷಧಿ ತರಿಸಿಕೊಳ್ಳಬೇಕು.**

ಸಭೆಗೆ ಮಾಹಿತಿ ನೀಡಿದ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ರಾಘವನ್, ಜಿಲ್ಲೆಯಲ್ಲಿ 3 ಸಾವಿರಕ್ಕೂ ಹೆಚ್ಚು ಜನರು ಹೋಂ ಐಸೊಲೇಷನ್‌ನಲ್ಲಿದ್ದಾರೆ. ದಾವಣಗೆರೆ ತಾಲ್ಲೂಕು ಒಂದರಲ್ಲೇ 2 ಸಾವಿರದಷ್ಟು ಜನ ಹೋಂ ಐಸೊಲೇಷನ್‌ನಲ್ಲಿದ್ದಾರೆ. ಜಿಲ್ಲೆಯಲ್ಲಿ 12 ಕೊರೊನಾ ಕಾಳಜಿ ಕೇಂದ್ರಗಳಿದ್ದು, ಇಲ್ಲಿ 760 ಜನ ಇದ್ದಾರೆ ಎಂದರು.

ಹರಿಹರ ಶಾಸಕ ಎಸ್. ರಾಮಪ್ಪ ಮಾತನಾಡಿ, ಹರಿಹರ ತಾಲ್ಲೂಕು ಆಸ್ಪತ್ರೆಯಲ್ಲಿ 50 ಹೆಚ್ಚುವರಿ ಆಕ್ಸಿಜನ್ ಬೆಡ್ ಹಾಗೂ ಮಲೇಬೆನ್ನೂರು ಆರೋಗ್ಯ ಕೇಂದ್ರದಲ್ಲಿ 25 ಹೆಚ್ಚುವರಿ ಆಕ್ಸಿಜನ್ ಬೆಡ್‌ಗಳನ್ನು ಕಲ್ಪಿಸಬೇಕು. ತಾಲ್ಲೂಕು ಆಸ್ಪತ್ರೆಗೆ ಫಿಸಿಷಿಯನ್ ವೈದ್ಯರನ್ನು ನೇಮಿಸಿ ವೆಂಟಿಲೇಟರ್ ಸೇವೆ ಆರಂಭಿಸಬೇಕು ಎಂದು ಒತ್ತಾಯಿಸಿದರು.

ಚನ್ನಗಿರಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಮಾತನಾಡಿ, ಚನ್ನಗಿರಿ ತಾಲ್ಲೂಕು ಆಸ್ಪತ್ರೆಯಲ್ಲಿ ನಾನು ಸ್ವಂತ ಖರ್ಚಿನಿಂದ 30 ಬೆಡ್ ಕಲ್ಪಿಸಿದ್ದೇನೆ. ಒಟ್ಟು 80 ಬೆಡ್‌ಗಳಿಗೆ ಹೆಚ್ಚಿನ ಸಿಬ್ಬಂದಿ ಬೇಕು. ವೆಂಟಿಲೇಟರ್ ಸೇವೆಯನ್ನು **(2ನೇ ಪುಟಕ್ಕೆ)**

### ಕೋವಿಡ್ ವಾರ್‌ರೂಂ ಸಹಾಯವಾಣಿ

**ಕೊರೊನಾ ರೋಗಿಗಳಿಗೆ ಜಿಲ್ಲಾಡಳಿತದಿಂದ ವಾರ್ ರೂಂ ಸ್ಥಾಪಿಸಲಾಗಿದ್ದು, ಜಿಲ್ಲೆಯ ಕೋವಿಡ್ ವಾರ್ ರೂಂ ಸಹಾಯವಾಣಿ ಸಂಖ್ಯೆಗಳು ಇಂತಿವೆ.**

**ದಾವಣಗೆರೆ ತಾಲೂಕು ಸಹಾಯವಾಣಿ ಸಂಖ್ಯೆ 74838 22966, 70197 85953, 1077. ಹರಿಹರ ತಾಲ್ಲೂಕು- 72598 70608. ಹೊನ್ನಾಳಿ ತಾಲ್ಲೂಕು -827751 2463. ಚನ್ನಗಿರಿ ತಾಲ್ಲೂಕು-82775 12550. ಜಗಳೂರು ತಾಲ್ಲೂಕು ವಾರ್ ರೂಂ ಸಂಖ್ಯೆ - 82775 12275**



**ಜಾತ್ರೆಯಲ್ಲ...ಮಾರ್ಕೆಟ್..!** ಇದಾವುದೋ ಜಾತ್ರೆಯ ಫೋಟೋ ಅಲ್ಲ. ಶುಕ್ರವಾರ ಬೆಳಿಗ್ಗೆ ಕಂಡು ಬಂದ ದಾವಣಗೆರೆ ಕೆ.ಆರ್. ಮಾರುಕಟ್ಟೆಯ ಚಿತ್ರಣವಿದು. ಮೂರು ದಿನಗಳ ಕಾಲ ಜಿಲ್ಲೆಯನ್ನು ಸಂಪೂರ್ಣ ಲಾಕ್‌ಡೌನ್ ಮಾಡಿದ ಪರಿಣಾಮ ಜನರು ಸಿಗುತ್ತದೋ ಇಲ್ಲವೋ ಎಂಬಂತೆ ಅಗತ್ಯ ವಸ್ತುಗಳಿಗಾಗಿ ಮುಗಿ ಬಿದ್ದಿದ್ದರು.

# ಕೊರೊನಾ ಸಾವುಗಳಿಗಿದೆ ಮೂರು ಪಟ್ಟಿ!

## ಜಿಲ್ಲಾಡಳಿತ ಪ್ರತಿದಿನ ಪ್ರಕಟಿಸುತ್ತಿರುವುದು ಒಂದೇ ಪಟ್ಟಿ

ದಾವಣಗೆರೆ, ಮೇ 21 - ನಮ್ಮ ಸುತ್ತ ಮುತ್ತ ಸಾವುಗಳ ಸಂಖ್ಯೆ ಹೆಚ್ಚಾಗುತ್ತಿದೆ. ಆದರೆ, ಜಿಲ್ಲಾಡಳಿತ ಪ್ರಕಟಿಸುವ ಪಟ್ಟಿಯಲ್ಲಿ ಕೊರೊನಾ ಸಾವಿನ ಸಂಖ್ಯೆ ಒಂದೋ - ಎರಡೋ ಇರುತ್ತದೆ. ಏಕೆ ಹೀಗೆ? ಎಂಬ ಪ್ರಶ್ನೆ ಸಾರ್ವಜನಿಕರಲ್ಲಿರುವುದು ಸಹಜ. ಆದರೆ, ಇದೇ ಪ್ರಶ್ನೆ ಶಾಸಕರಿಗೂ ಕಾಡುತ್ತಿದೆ. ಈ ಬಗ್ಗೆ ಅವರು ಜಿಲ್ಲಾಡಳಿತ ಭವನದಲ್ಲಿ ಕರೆಯಲಾಗಿದ್ದ ಸಭೆಯಲ್ಲಿ ಸ್ಪಷ್ಟನೆ ಕೇಳಿದ್ದಾರೆ.

ಇದಕ್ಕೆ ಉತ್ತರಿಸಿರುವ ಅಧಿಕಾರಿಗಳು, ಕೊರೊನಾ ಸಾವುಗಳನ್ನು ಮೂರು ಪಟ್ಟಿಯಲ್ಲಿ ವಿಂಗಡಿಸಲಾಗುತ್ತಿದೆ. ಇದರಲ್ಲಿ ಒಂದು ಪಟ್ಟಿಯನ್ನು ಬುಲೆಟಿನ್‌ನಲ್ಲಿ ಪ್ರತಿದಿನ ಪ್ರಕಟಿಸಲಾಗುತ್ತಿದೆ ಎಂದು ಹೇಳಿದ್ದಾರೆ. ಸಭೆಯಲ್ಲಿ ಮಾತನಾಡಿದ ಹರಿಹರ ಶಾಸಕ ಎಸ್. ರಾಮಪ್ಪ ಹಾಗೂ ಚನ್ನಗಿರಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ, ಸಾವುಗಳ ಸಂಖ್ಯೆ ಕಡಿಮೆ ತೋರಿಸಲಾಗುತ್ತಿದೆ ಎಂದು ಹೇಳಿದರು.

ನಿನ್ನೆಯೇ ಹರಿಹರದ ಆಸ್ಪತ್ರೆಯಲ್ಲಿ ಐದು ಸಾವುಗಳು ಸಂಭವಿಸಿವೆ. ಹರಿಹರ ಆಸ್ಪತ್ರೆಯಲ್ಲಿ 56 ಸಾವುಗಳು ಸಂಭವಿಸಿವೆ. ಆದರೆ, ಈ ಸಾವುಗಳು ಜಿಲ್ಲಾಡಳಿತ ಪ್ರಕಟಿಸುವ ವರದಿಯಲ್ಲಿ ಕಂಡುಬರುತ್ತಿಲ್ಲ ಎಂದರು.

ಸಾವುಗಳ ಕುರಿತು ವಾಸ್ತವ ಹೇಳಿದರೆ ಸರ್ಕಾರದಿಂದ ನೆರವು ಪಡೆಯಲು ಸಾಧ್ಯ ಎಂದು ಹೇಳಿದ ಶಾಸಕ **(3ನೇ ಪುಟಕ್ಕೆ)**

# ಇಂದಿನಿಂದ 18-44ರ ಲಸಿಕೆ ಪುನರಾರಂಭ

ಬೆಂಗಳೂರು, ಮೇ 21 - 18 ರಿಂದ 44 ವರ್ಷದ ವಯೋಮಾನದವರಿಗೆ ರಾಜ್ಯ ಸರ್ಕಾರ ನಾಳೆ ಶನಿವಾರದಿಂದ ಕೊರೊನಾ ಲಸಿಕೆ ವಿತರಣೆ ಪುನರಾರಂಭಿಸಲಿದೆ.

ಮೊದಲ ಹಂತದಲ್ಲಿ ಕೋವಿಡ್ ಮುಂಚೂಣಿಯಲ್ಲಿರುವ ಕಾರ್ಯಕರ್ತರಿಗೆ ಲಸಿಕೆ ನೀಡಲಾಗುವುದು ಎಂದು ಸರ್ಕಾರ ತಿಳಿಸಿದೆ.

ಅಂಗವಿಕಲರು, ಖೈದಿಗಳು, ಸ್ಮಶಾನದಲ್ಲಿ ಕೆಲಸ ಮಾಡುವ ಸಿಬ್ಬಂದಿ, ಆರೋಗ್ಯ ಕಾರ್ಯಕರ್ತರ ಕುಟುಂಬದವರು, ಕೋವಿಡ್ ಕರ್ತವ್ಯಕ್ಕೆ ನಿಯೋಜಿಸಲಾದ ಶಿಕ್ಷಕರು, ಸರ್ಕಾರಿ ಸಾರಿಗೆ ಸಿಬ್ಬಂದಿ, ಆಟೋ - ಕ್ಯಾಬ್ ಚಾಲಕರು, ವಿದ್ಯುತ್ - ನೀರು ಸರಬರಾಜು ಮಾಡುವವರು, ಅಂಚೆ ಇಲಾಖೆಯ ಸಿಬ್ಬಂದಿಗಳಿಗೆ ಲಸಿಕೆ ನೀಡಲಾಗುವುದು.

### ಅಂಗವಿಕಲರು, ಸ್ಮಶಾನ ಸಿಬ್ಬಂದಿ, ಚಾಲಕರು, ಔಷಧ ಪೂರೈಕೆದಾರರು ಮತ್ತಿತರರಿಗೆ ಆದ್ಯತೆ

ಬೀದಿ ಬದಿ ವ್ಯಾಪಾರಿಗಳು, ಭದ್ರತೆ - ಕಚೇರಿಗಳ ಹೌಸ್‌ಕೀಪಿಂಗ್ ಸಿಬ್ಬಂದಿ, ನ್ಯಾಯಾಂಗ ಅಧಿಕಾರಿಗಳು, ವೃದ್ಧರು - ತೀವ್ರ ಅನಾರೋಗ್ಯದಿಂದ ಬಳಲುತ್ತಿರುವವರ ಆರೈಕೆದಾರರು, ಮಕ್ಕಳ ಸಂರಕ್ಷಣಾಧಿಕಾರಿಗಳು, ಮಾಧ್ಯಮದವರು, ಆಸ್ಪತ್ರೆಗಳಿಗೆ ಸರಕು ಸರಬರಾಜು ಮಾಡುವವರು, ತೈಲ ಹಾಗೂ ಅನಿಲ ಸರಬರಾಜು ಮಾಡುವವರು, ಔಷಧಿ ತಯಾರಿಸುವ ಸಿಬ್ಬಂದಿಗಳು, ಆಸ್ಪತ್ರೆಗಳಿಗೆ ವೈದ್ಯಕೀಯ ಸರಕು ಸರಬರಾಜು ಮಾಡುವವರು, ವೃದ್ಧಾಶ್ರಮ ವಾಸಿಗಳು, ಭಾರತೀಯ ಆಹಾರ ನಿಗಮದ ಸಿಬ್ಬಂದಿ ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕೆಲಸಗಾರರಿಗೆ ಲಸಿಕೆ ನೀಡಲಾಗುವುದು.

ರಾಜ್ಯ ಸರ್ಕಾರ ನಿನ್ನೆ ಸಂಜೆ ಪ್ರಕಟಣೆ ಹೊರಡಿಸಿದ್ದು, ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಲಸಿಕೆ ಪಡೆಯಬಹುದಾಗಿದೆ ಎಂದಿದೆ. ಮೇ 1 ರಿಂದಲೇ ಈ ಸಮುದಾಯಕ್ಕೆ ಲಸಿಕೆ ನೀಡುವ **(2ನೇ ಪುಟಕ್ಕೆ)**

# ಕೊರೊನಾ ಚಿಕಿತ್ಸೆಗೆ ಖಾಸಗಿ ಬೆಡ್ ಕೊಡದಿದ್ರೆ ಕ್ರಮ

ದಾವಣಗೆರೆ, ಮೇ 21 - ಕೊರೊನಾ ಸಂದರ್ಭದಲ್ಲಿ ಖಾಸಗಿ ಆಸ್ಪತ್ರೆಗಳು ಶೇ.50 ಹಾಗೂ ಖಾಸಗಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳು ಶೇ.75ರವರೆಗೆ ಬೆಡ್ ನೀಡದೇ ಇರುವುದನ್ನು ಯಾವ ಸರ್ಕಾರವೂ ಒಪ್ಪಲಾಗದು ಎಂದು ಹೇಳಿರುವ ಆರೋಗ್ಯ ಸಚಿವ ಡಾ. ಸುಧಾಕರ್, ಬೆಡ್ ಕೊಡದೇ ಇದ್ದರೆ ಅನಿವಾರ್ಯವಾಗಿ ಕ್ರಮ ಜರುಗಿಸಬೇಕಾಗುತ್ತದೆ ಎಂದು ಹೇಳಿದ್ದಾರೆ.

ಜಿಲ್ಲಾಡಳಿತ ವತಿಯಿಂದ ಕರೆಯಲಾಗಿದ್ದ ಕೊರೊನಾ ನಿಯಂತ್ರಣ ಕುರಿತ ಸಭೆಯಲ್ಲಿ ಮಾತನಾಡುತ್ತಿದ್ದ ಅವರು, ಎಸ್.ಎಸ್.ಐ.ಎಂ.ಎಸ್. ಹಾಗೂ ಜೆ.ಜೆ.ಎಂ.ಸಿ. ವೈದ್ಯಕೀಯ ಕಾಲೇಜುಗಳಿಂದ 91 ಬೆಡ್‌ಗಳನ್ನು ಮಾತ್ರ ಸರ್ಕಾರಕ್ಕೆ ಕೊಡಲಾಗಿದೆ ಎಂಬ ಮಾಹಿತಿ ನಂತರ ಈ ಮಾತುಗಳನ್ನು ಆಡಿದ್ದಾರೆ.

ನಾವು ಯಾರದೇ ದಯೆ, ಇಲ್ಲವೇ ದಾನ ಕೇಳುತ್ತಿಲ್ಲ. ಪ್ರತಿ ರೋಗಿಯನ್ನು ಖಾಸಗಿ ಆಸ್ಪತ್ರೆಗಳಿಗೆ ಕಳಿಸಿದಾಗ ಹಣ ಕೊಡುತ್ತಿದ್ದೇವೆ. ಇಷ್ಟಾದರೂ ಬೆಡ್‌ಗಳನ್ನು ಕೊಡುವುದಿಲ್ಲ, ಸಿಗುವುದಿಲ್ಲ ಎಂದಾದರೆ ನಾವು ನಾಗರಿಕ ಸಮಾಜದಲ್ಲಿದ್ದೀವಾ? ಎಂಬ ಪ್ರಶ್ನೆ ಹುಟ್ಟುತ್ತದೆ ಎಂದರು.

### ಖಾಸಗಿ ವೈದ್ಯಕೀಯ ಕಾಲೇಜುಗಳು ಸ್ಪಂದಿಸದಿದ್ದರೆ ಕಷ್ಟ: ಸಚಿವ ಸುಧಾಕರ್

**ದಾವಣಗೆರೆ ಜಿಲ್ಲೆಯಲ್ಲಿ ಎರಡು ವೈದ್ಯಕೀಯ ಕಾಲೇಜುಗಳಿವೆ ಎಂಬ ಕಾರಣಕ್ಕಾಗಿ ಸರ್ಕಾರ ಇಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಮುಂದಾಗಿಲ್ಲ ಎಂದು ಆರೋಗ್ಯ ಸಚಿವ ಡಾ. ಸುಧಾಕರ್ ತಿಳಿಸಿದ್ದಾರೆ.**

**ವೈದ್ಯಕೀಯ ಕಾಲೇಜುಗಳಿಂದ ಚಿಕಿತ್ಸೆಯಷ್ಟೇ ಅಲ್ಲದೇ ವೈದ್ಯಕೀಯ ಸಿಬ್ಬಂದಿಗೆ ಶಿಕ್ಷಣ ಹಾಗೂ ಕೌಶಲ್ಯ ಕಲಿಸುವ ಅಗತ್ಯಗಳೂ ಈಡೇರಬೇಕು. ಇದಕ್ಕಾಗಿಯೇ ನಾವು ನಿಮಗೆ ಎಲ್ಲ ರೀತಿಯ ಸಬ್ಸಿಡಿ ಹಾಗೂ ಸಹಕಾರ ಕೊಡುತ್ತೇವೆ ಎಂದು ಹೇಳಿದರು. ಇಲ್ಲಿ ಇನ್ನೊಂದು ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸುವುದು ನಮಗೆ ಬಹಳ ಸುಲಭ, ಇದಕ್ಕೆ ಹೆಚ್ಚು ಹಣವೂ ಬೇಡ. ಇಲ್ಲಿ ಎರಡು ವೈದ್ಯಕೀಯ ಕಾಲೇಜುಗಳಿವೆ ಎಂಬ ಕಾರಣಕ್ಕೆ ಅಂತಹ ಕ್ರಮ ತೆಗೆದುಕೊಂಡಿಲ್ಲ. ಜಿಲ್ಲೆಯ ಜನರಿಗೆ ನೀವು ಸಮರ್ಪಕವಾಗಿ ಸ್ಪಂದಿಸದೇ ಹೋದರೆ ಕಷ್ಟವಾಗುತ್ತದೆ ಎಂದರು.**

ಕೆ.ಪಿ.ಎಂ.ಇ. ಕಾಯ್ದೆ ಹಾಗೂ ವಿಕೋಪ ನಿರ್ವಹಣೆ ಕಾಯ್ದೆಯಡಿ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಆರೋಗ್ಯಾಧಿಕಾರಿಗಳು ಖಾಸಗಿ ಆಸ್ಪತ್ರೆಗಳಿಂದ ಶೇ.50 ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳಿಂದ ಶೇ.75ರಷ್ಟು ಬೆಡ್ ಪಡೆಯಬೇಕು. ಬೆಡ್ ಕೊಡದಿದ್ದರೆ ಕಾನೂನು ಕ್ರಮ ತೆಗೆದುಕೊಳ್ಳಬೇಕು ಎಂದು ತಿಳಿಸಿದರು.

ರಾಜ್ಯದ ಪ್ರಮುಖ ಮಠಾಧೀಶರು ನಡೆಸುತ್ತಿರುವ ವೈದ್ಯಕೀಯ ಕಾಲೇಜು ಆಸ್ಪತ್ರೆಗಳೂ ಸೇರಿದಂತೆ ಎಲ್ಲ ಆಸ್ಪತ್ರೆಗಳು ಬೆಡ್‌ಗಳನ್ನು ಕೊಟ್ಟಿವೆ. ಹೀಗಿರುವಾಗ ದಾವಣಗೆರೆ ಒಂದು ಮಾತ್ರ ವಿಶೇಷ ಎಂದಾಗಬಾರದು. ಯಾವ ವೈದ್ಯಕೀಯ ಕಾಲೇಜೂ ಸಹ ಈ ರೀತಿ ಅನ್ಯಾಯವಾಗಿ ನಡೆದುಕೊಂಡಿಲ್ಲ, ಬಹಳ ನೋವಾಗುತ್ತಿದೆ ಎಂದು ತಿಳಿಸಿದರು.

ಇದು ಆರೋಗ್ಯ ತುರ್ತು ಸ್ಥಿತಿ ಕಾಲವಾಗಿದ್ದು, ಅತ್ಯಂತ ತುರ್ತು ನಾನ್ ಕೋವಿಡ್ ರೋಗಿಗಳಿಗೆ **(3ನೇ ಪುಟಕ್ಕೆ)**


## ಭಾವಪೂರ್ಣ ಶ್ರದ್ಧಾಂಜಲಿ



ನನ್ನೂರಿನ ನನ್ನ ಸಹಪಾಠಿ...
ನನ್ನ ಆತ್ಮೀಯ... ಸದಾ ನಗುವೇ ಅವನ
ಮಾತಾಗಿತ್ತು.. ಸಹೃದಯಿ...
ಕಪಟವಿಲ್ಲದ ನಿಷ್ಕಪಟ ವ್ಯಕ್ತಿ...
ಮಲೇಬೆನ್ನೂರು ಪಟ್ಟಣದ
**ಹೊಸಮನೆ ನಾಗೇಶ್**
ಇಂದು ನಮ್ಮನ್ನು ಬಿಟ್ಟು ಹೋದ
ಎಂದರೆ ನಂಬೋದಾದ್ರು ಹ್ಯಾಗೆ....
ದೇವರೇ ಈ ಸಾವು ನ್ಯಾಯವೇ...
ಮತ್ತೊಮ್ಮೆ ಹುಟ್ಟಿ ಬಾ ಎಂದು
ಬಯಸುವ ನಿನ್ನ ಬಾಲ್ಯದ ಗೆಳೆಯ

**ಚಂದ್ರಶೇಖರ್,** ರಿ. ಎಕ್ಸಿಕ್ಯೂಟಿವ್ ಇಂಜಿನಿಯರ್, ಮಲೇಬೆನ್ನೂರು.

## ಜಿಪಂ ಕಕ್ಕರಗೊಳ್ಳ ಕ್ಷೇತ್ರದಲ್ಲಿ ಕೋವಿಡ್ ಕೇರ್ ಸೆಂಟರ್ ಸ್ಥಾಪನೆಗೆ ಒತ್ತಾಯ

ದಾವಣಗೆರೆ, ಮೇ 21- ಜಿಲ್ಲಾ ಪಂಚಾಯತಿಯ ಕಕ್ಕರಗೊಳ್ಳ ಕ್ಷೇತ್ರದ ವ್ಯಾಪ್ತಿಯಲ್ಲಿ 3 ಸಮುದಾಯ ಆರೋಗ್ಯ ಕೇಂದ್ರಗಳಿದ್ದು, ಅವುಗಳನ್ನು ಕೋವಿಡ್ ಕೇರ್ ಸೆಂಟರ್ ಗಳನ್ನಾಗಿಸುವಂತೆ ಕಕ್ಕರಗೊಳ್ಳ ಕ್ಷೇತ್ರದ ಜಿಲ್ಲಾ ಪಂಚಾಯ್ತಿ ಸದಸ್ಯರಾದ ಶ್ರೀಮತಿ ರೇಣುಕಾ ಕರಿಬಸಪ್ಪ ಅವರು ಜಿಲ್ಲಾಧಿಕಾರಿಗಳನ್ನು ಒತ್ತಾಯಿಸಿದ್ದಾರೆ. ದೊಡ್ಡ ಬಾತಿ ಪ್ರಾಥಮಿಕ ಆರೋಗ್ಯ ಕೇಂದ್ರ, ಕಕ್ಕರಗೊಳ್ಳ ಪ್ರಾಥಮಿಕ ಆರೋಗ್ಯ ಕೇಂದ್ರ, ಅರಸಾಪುರ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಬೆಡ್ ವ್ಯವಸ್ಥೆ ಮತ್ತು ಡಾಕ್ಟರ್ಸ್, ನರ್ಸ್, ಸಿಬ್ಬಂದಿಗಳಿದ್ದಾರೆ. ಆಮ್ಲಜನಕದ ಪೂರೈಕೆ ಮಾಡಿದರೆ ಕೋವಿಡ್ ಕೇರ್ ಸೆಂಟರ್ ಸ್ಥಾಪಿಸಬಹುದು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

## ಪಡಿತರ ವಿತರಕರ ಸಹಕಾರ ಸಂಘಗಳ ಸಿಬ್ಬಂದಿಗಳಿಗೆ ಪ್ರತ್ಯೇಕ ಲಸಿಕೆ ನೀಡಿ

ದಾವಣಗೆರೆ, ಮೇ 21- ಪಡಿತರ ವಿತರಕರ ಸಹಕಾರ ಸಂಘಗಳ ಸಿಬ್ಬಂದಿಗಳಿಗೆ ಪ್ರತ್ಯೇಕವಾಗಿ ಕೋವಿಡ್ ಲಸಿಕೆ ನೀಡಲು ಜನತಾ ಬಜಾರ್ ನಿರ್ದೇಶಕ ವಿ. ಮಂಜುನಾಥ್ ಜಿಲ್ಲಾಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

ನಗರದಲ್ಲಿ ಸುಮಾರು 100 ಕ್ಕೂ ಹೆಚ್ಚು ಪಡಿತರ ವಿತರಕರ ಸಹಕಾರ ಸಂಘಗಳಿದ್ದು, ಸಂಘದ ಮಾಲೀಕರು ಹಾಗೂ ಸಿಬ್ಬಂದಿಗಳು ತಮ್ಮ ಜೀವವವನ್ನು ಲೆಕ್ಕಿಸದೆ ಸಾರ್ವಜನಿಕರಿಗೆ ಪಡಿತರ ವಿತರಣೆ ಮಾಡುತ್ತಾ ಕೊರೊನಾ ವಾರಿಯರ್ಸ್‌ಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದಿದ್ದಾರೆ.

ಈ ಹಿನ್ನೆಲೆಯಲ್ಲಿ ಪಡಿತರ ವಿತರಕರ ಸಂಘಗಳ ಸಿಬ್ಬಂದಿ ಮತ್ತು ಅವರ ಕುಟುಂಬಕ್ಕೆ ಪ್ರತ್ಯೇಕ ಲಸಿಕೆ ನೀಡುವಂತೆ ಮಂಜುನಾಥ್ ಕೋರಿದ್ದಾರೆ.

## ಕನ್ನಡ ಪರ ಚಟುವಟಿಕೆಗಳಿಗೆ ನೆರವು ನೀಡುತ್ತಿದ್ದ ಸಂತೋಜಿ ರಾವ್ ನಿಧನ



ದಾವಣಗೆರೆ, ಮೇ 21 - ನಗರದ ಹಿರಿಯ ಕೈಗಾರಿಕೋದ್ಯಮಿ ಬಿ.ಸಂತೋಜಿ ರಾವ್ (75) ಅವರು ಇಂದು ಸಂಜೆ ಬೆಂಗಳೂರಿನಲ್ಲಿ ನಿಧನರಾದರು.

ಎಪ್ಪತ್ತರ ದಶಕದಲ್ಲಿ ಸ್ಥಳೀಯ ಕನ್ನಡ ಪರ ಚಟುವಟಿಕೆಗಳಿಗೆ ಆರ್ಥಿಕ ನೆರವೀಯುವುದಲ್ಲದೆ ಸಕ್ರಿಯರಾಗಿ ಪಾಲ್ಗೊಳ್ಳುತ್ತಿದ್ದರು. ಕನ್ನಡ ಚಳುವಳಿಯ ಕೋಶಾಧ್ಯಕ್ಷರಾಗಿದ್ದ ರಾವ್, ಕನ್ನಡ ಕಲಾವಿದರ ಸಂಘ ಮೊದಲಾದ ಹಲವಾರು ಕನ್ನಡ ಪರ ಕಾರ್ಯಗಳಿಗೆ ಒತ್ತಾಸೆಯಾಗಿದ್ದರು.

ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರನ್ನು ಅಗಲಿರುವ ಸಂತೋಜಿ ರಾವ್ ಅವರ ಅಂತ್ಯಕ್ರಿಯೆಯು ಬೆಂಗಳೂರಿನಲ್ಲಿ ಕೊರೊನಾ ನಿಯಮಾವಳಿಗನುಸಾರವಾಗಿ ನೆರವೇರಿತು. ಸಂತೋಜಿರಾವ್ ನಿಧನಕ್ಕೆ ಹಿರಿಯ ಲೇಖಕ ಹಳೇಬೀಡು ರಾಮಪ್ರಸಾದ್ ಸಂತಾಪ ವ್ಯಕ್ತಪಡಿಸಿದ್ದಾರೆ.

# ಕೊರೊನಾ ವಾರಿಯರ್ಸ್‌ಗಳಿಗೆ ಹರಿಹರ ತಾಲ್ಲೂಕಿನಲ್ಲೇ ಹೆಚ್ಚು ಕಾಳಜಿ



ಹರಿಹರ, ಮೇ 21- ಶ್ರೀ ತರಳಬಾಳು ಯುವಕರ ಸಂಘ, ಶ್ರೀ ತರಳಬಾಳು ಮಹಿಳಾ ಘಟಕ ಮತ್ತು ಹರಿಹರ ತಾಲ್ಲೂಕು ಸಾಧು ವೀರ ಶೈವ ಸಮಾಜದ ವತಿಯಿಂದ ನಗರದ ಕೊರೊನಾ ವಾರಿಯರ್ಸ್ ಮತ್ತು ಆಸ್ಪತ್ರೆಯ ಲ್ಲಿರುವ ಸೋಂಕಿತರಿಗೆ ಹಾಗೂ ಅವರ ಪೋಷಕರಿಗೆ ಕಳೆದ 4-5 ದಿನಗಳಿಂದ ಮಧ್ಯಾಹ್ನದ ಊಟ ನೀಡುತ್ತಿರುವುದು ಮಾನವೀಯ ಸೇವೆಯಾಗಿದೆ ಎಂದು ಶಾಸಕ ಎಸ್.ರಾಮಪ್ಪ ಮೆಚ್ಚುಗೆ ವ್ಯಕ್ತಪಡಿಸಿದರು.

ನಗರದ ಸಾರ್ವಜನಿಕ ಆಸ್ಪತ್ರೆ ಎದುರು ಮಧ್ಯಾಹ್ನದ ಊಟ ವಿತರಣೆಗೆ ಚಾಲನೆ ನೀಡಿ ಮಾತನಾಡಿದ ಶಾಸಕರು, ಹರಿಹರ ತಾಲ್ಲೂಕಿನ ಸಂಘ-ಸಂಸ್ಥೆಗಳು ಇಂತಹ ಕೆಲಸಗಳನ್ನು ಹೆಚ್ಚು ಮಾಡುತ್ತಿದ್ದು, ಅವರಿಗೆ ಆಯುರಾರೋಗ್ಯ ಭಾಗ್ಯ ನೀಡಲೆಂದು ಶುಭ ಹಾರೈಸಿದರು.

ಹರಿಹರ ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್ ಮಾತನಾಡಿ, ನಗರದ ಜೊತೆಗೆ ಮಲೇಬೆನ್ನೂರು ಪಟ್ಟಣದಲ್ಲಿರುವ ಕೊರೊನಾ ವಾರಿಯರ್ಸ್‌ಗಳಿಗೂ ಈ ಊಟ ನೀಡುವ ಬಗ್ಗೆ ಚರ್ಚೆ ನಡೆದಿದ್ದು, ಶನಿವಾರದಿಂದ ಪ್ರಾರಂಭಿಸುವುದಾಗಿ ತಿಳಿಸಿದರು.

ಹರಿಹರ ತಾಲ್ಲೂಕು ಸಾಧು ವೀರಶೈವ ಸಮಾಜದ ಅಧ್ಯಕ್ಷ ಹಾಗೂ ಎಪಿಎಂಸಿ ಮಾಜಿ ಅಧ್ಯಕ್ಷ ಅಮರಾವತಿ ಮಹಾದೇವಪ್ಪ ಗೌಡ್ರು ಈ ದಿನದ ದಾಸೋಹ ದಾನಿಗಳಾಗಿದ್ದರು.

ದಾಸೋಹ ವ್ಯವಸ್ಥೆಯ ನೇತೃತ್ವ ವಹಿಸಿರುವ ಕೊಂಡಜ್ಜಿ ವೀರಣ್ಣ ಅವರು, ಒಂದು ದಿನದ ಊಟಕ್ಕೇ 12 ಸಾವಿರ ರೂ. ಖರ್ಚಾಗುತ್ತಿದ್ದು, ದಾನಿಗಳ ನೆರವಿನಿಂದ ಲಾಕ್‌ಡೌನ್ ಇರುವವರೆಗೂ ಪ್ರತಿನಿತ್ಯ ಮಧ್ಯಾಹ್ನ ಸುಮಾರು 400 ರಿಂದ 500 ಜನರಿಗೆ ಊಟ ನೀಡಲಾಗುವುದು ಎಂದು ತಿಳಿಸಿದ್ದಾರೆ.

ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ಬೆಳ್ಳೂಡಿ ನರೇಂದ್ರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ.ಅಬೀದ್ ಅಲಿ, ನಗರಸಭೆ ಸದಸ್ಯೆ ಶ್ರೀಮತಿ ಅಶ್ವಿನಿ ಕೃಷ್ಣ, ಅಜಿತ್ ಸಾವಂತ್, ಬೆಳ್ಳೂಡಿ ಗೀತಮ್ಮ, ಗೌಡ್ರ ಮಲ್ಲೇಶಪ್ಪ, ಕೊಂಡಜ್ಜಿ ಶಿವಕುಮಾರ್, ಹರಗನಹಳ್ಳಿ ರಾಜು, ಬೆಳ್ಳೂಡಿ ಪಾಲಾಕ್ಷಪ್ಪ, ಕುಂಬಳೂರು ವಿಜಯ್, ಶಿವನಹಳ್ಳಿ ಸಂತೋಷ್, ಮೂಲಿಮನೆ ಕಿರಣ್, ಪತ್ರಕರ್ತ ಜಿಗಳಿ ಪ್ರಕಾಶ್, ಟಿ.ಹೆಚ್.ಓ ಡಾ.ಚಂದ್ರಮೋಹನ್, ಆಸ್ಪತ್ರೆಯ ಆಡಳಿತಾಧಿಕಾರಿ ಡಾ.ಹನುಮಾನಾಯ್ಕ ಈ ವೇಳೆ ಹಾಜರಿದ್ದರು.

## ಹರಿಹರ : 116 ಜನರಿಗೆ ಸೋಂಕು

ಮಲೇಬೆನ್ನೂರು, ಮೇ 21- ಎಲ್ಲೆಡೆ ಕೊರೊನಾ ಮಹಾಮಾರಿ ವ್ಯಾಪಕವಾಗಿ ಹರಡುತ್ತಿದ್ದು, ಸಾವು-ನೋವು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಜನರು ಜಾಗೃತರಾಗಿ ಶುಕ್ರವಾರ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದ ಎದುರು ಕೋವಿಡ್ ಟೆಸ್ಟಿಗಾಗಿ ಸರದಿ ಸಾಲಿನಲ್ಲಿ ನಿಂತಿದ್ದರು.

ಈ ಹಿಂದೆ ಪ್ರತಿದಿನ 20 ರಿಂದ 30 ಜನರು ಮಾತ್ರ ಕೋವಿಡ್ ಗಂಟಲು ದ್ರವ ಪರೀಕ್ಷೆ ಮಾಡಿಸಿಕೊಳ್ಳುತ್ತಿದ್ದರು. ಆದರೆ, ಇಂದು 57 ಜನರು ಟೆಸ್ಟ್ ಮಾಡಿಸಿಕೊಂಡಿದ್ದು, ಅದರಲ್ಲಿ 12 ಜನರಿಗೆ ಪಾಸಿಟಿವ್ ಬಂದಿದೆ ಎಂದು ಆರೋಗ್ಯ ಕೇಂದ್ರದ ವೈದ್ಯ ಡಾ. ನಿಸಾರ್ ತಿಳಿಸಿದರು.

**ಲಸಿಕೆ :** 45 ವರ್ಷ ಮೇಲ್ಪಟ್ಟವರಿಗೆ ಮಾತ್ರ ಕೋವಿಶೀಲ್ಡ್ ಲಸಿಕೆ ಹಾಕಲಾಗುತ್ತಿದ್ದು, ಜನರು ಸಮುದಾಯ ಆರೋಗ್ಯ ಕೇಂದ್ರಕ್ಕೆ ಬಂದು ಲಸಿಕೆ ಹಾಕಿಸಿಕೊಳ್ಳುವಂತೆ ಡಾ.ನಿಸಾರ್ ಮನವಿ ಮಾಡಿದ್ದಾರೆ.

**116 ಜನರಿಗೆ ಪಾಸಿಟಿವ್ :** ಶುಕ್ರವಾರ ಬೆಳಗಿನ ವರದಿ ಪ್ರಕಾರ ಹರಿಹರ ತಾಲ್ಲೂಕಿನಲ್ಲಿ 116 ಜನರ ಕೋವಿಡ್ ಟೆಸ್ಟ್ ವರದಿ ಪಾಸಿಟಿವ್ ಬಂದಿದ್ದು, ಇದರಲ್ಲಿ 75 ಜನ ಗ್ರಾಮೀಣ ಪ್ರದೇಶದವರಾಗಿದ್ದಾರೆ. ಬುಧವಾರ 98 ಜನರಿಗೆ ತಗುಲಿದ್ದ ಸೋಂಕು, ಗುರುವಾರ 60 ಜನರಿಗೆ ಇಳಿಕೆಯಾಗಿತ್ತು. ಶುಕ್ರವಾರ ಸಂಜೆ ಮಾಹಿತಿ ಪ್ರಕಾರ ರ್‍ಯಾಪಿಡ್ ಟೆಸ್ಟ್‌ನಲ್ಲಿ 50ಕ್ಕೂ ಹೆಚ್ಚು ಜನರಿಗೆ ಸೋಂಕು ದೃಢಪಟ್ಟಿತ್ತು. ಹರಿಹರ ತಾಲ್ಲೂಕಿನಲ್ಲಿ 529 ಸಕ್ರಿಯ ಕೇಸ್‌ಗಳಿವೆ.

## ಇಂದಿನಿಂದ ಲಸಿಕೆ ಪುನರಾರಂಭ

**(1ನೇ ಪುಟದಿಂದ)** ತೀರ್ಮಾನ ಕೈಗೊಳ್ಳಲಾಗಿತ್ತು. ಆದರೆ ಅಗತ್ಯ ಲಸಿಕೆ ಶೇಖರಣೆ ಇಲ್ಲದ ಕಾರಣ ಮತ್ತು 45 ವರ್ಷ ಮೇಲ್ಪಟ್ಟವರಿಗೆ ಎರಡನೇ ಹಂತದ ಲಸಿಕೆ ನೀಡಬೇಕೆಂಬ ಉದ್ದೇಶದಿಂದ ಈ ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ಮುಂದೂಡಲಾಗಿತ್ತು. ಕೇಂದ್ರ ಸರ್ಕಾರ 45 ವರ್ಷ ಮೇಲ್ಪಟ್ಟವರಿಗೆ ಉಚಿತ ಲಸಿಕೆ ನೀಡುತ್ತಿದೆ. 18 ರಿಂದ 44 ವಯೋಮಿತಿಯವರಿಗೆ ರಾಜ್ಯ ಸರ್ಕಾರದ ವತಿಯಿಂದಲೇ ಉಚಿತ ಲಸಿಕೆ ನೀಡುವ ತೀರ್ಮಾನ ಕೈಗೊಂಡು, ಇದಕ್ಕಾಗಿ 3 ಕೋಟಿ ಲಸಿಕೆ ಖರೀದಿ ಮಾಡಲು ಜಾಗತಿಕ ಟೆಂಡರ್ ಕರೆಯಲಾಗಿತ್ತು.

ಇದೀಗ ಕೇಂದ್ರ ಮತ್ತು ಖಾಸಗಿ ಸಂಸ್ಥೆಗಳಿಂದ ಖರೀದಿ ಮಾಡಿರುವ ಲಸಿಕೆಗಳನ್ನು ಈ ವಯೋಮಿತಿಯವರಿಗೆ ನಾಳೆಯಿಂದ ಲಸಿಕೆ ಹಾಕಲಾಗುತ್ತದೆ.

ಈ ಎಂದಿನಂತೆ 45 ವರ್ಷ ಮೇಲ್ಪಟ್ಟವರಿಗೆ ಮೊದಲೇ ಹಾಗೂ ಎರಡನೇ ಹಂತದ ಲಸಿಕೆ ಕಾರ್ಯಕ್ರಮವು ಮುಂದುವರೆಯಲಿದೆ.

## ಜಯವಿಭವ ಶ್ರೀಗಳವರ 58ನೇ ಸ್ಮರಣೆ



ದಾವಣಗೆರೆ, ಮೇ 21- ಹಿರಿಯ ಜಗದ್ಗುರು ಲಿಂ. ಶ್ರೀ ಜಯವಿಭವ ಮುರುಘರಾಜೇಂದ್ರ ಮಹಾಸ್ವಾಮಿಗಳವರ 58ನೇ ಸ್ಮರಣೆ ಸಂದರ್ಭದಲ್ಲಿ, ಜಗದ್ಗುರುಗಳವರ ಆಶೀರ್ವಾದದಿಂದ ಕೊರೊನಾ ಮಾರಿಯು ನಾಶವಾಗಿ, ಎಲ್ಲರಿಗೂ ಸುಖ - ಶಾಂತಿ, ಆರೋಗ್ಯ - ನೆಮ್ಮದಿ ದೊರೆಯಲಿ ಎಂದು ಬಸವ ಪ್ರಭಾತ್ ಪೇರಿ ನಡೆಸುವ ವೀರಶೈವ ತರುಣ ಯುವಕ ಸಂಘದ ಅಧ್ಯಕ್ಷ ಕಣಕುಪ್ಪಿ ಮುರುಗೇಶಪ್ಪ, ವೀರಶೈವ ಸಮಾಜದ ಮುಖಂಡ ಜೆ. ಸೋಮನಾಥ್ ಅವರುಗಳು ಪ್ರಾರ್ಥಿಸಿದ್ದಾರೆ.

## ಹೊನ್ನಾಳಿ ರೈತರಿಂದ ಬಾಬಾಗೌಡ ಪಾಟೀಲರಿಗೆ ಶ್ರದ್ಧಾಂಜಲಿ



ಹೊನ್ನಾಳಿ, ಮೇ 21- ಕೇಂದ್ರದ ಮಾಜಿ ಗ್ರಾಮೀಣಾಭಿವೃದ್ಧಿ ಸಚಿವ ಬಾಬಾಗೌಡ ಪಾಟೀಲರು ಹೊನ್ನಾಳಿ ತಾಲ್ಲೂಕು ರೈತ ಸಂಘದ ಅನೇಕ ಸಭೆಗಳಲ್ಲಿ ಭಾಗವಹಿಸಿ ರೈತರ ಹೋರಾಟಕ್ಕೆ ಶಕ್ತಿ ಹಾಗೂ ಸ್ಫೂರ್ತಿಯನ್ನು ತುಂಬಿದ್ದರು ಎಂದು ಅಖಂಡ ಕರ್ನಾಟಕ ರೈತ ಸಂಘದ ರಾಜ್ಯ ಉಪಾಧ್ಯಕ್ಷ ದೊಡ್ಡೇರಳ್ಳಿ ನಾಗರಾಜಪ್ಪ ಹೇಳಿದರು.

ರೈತ ಸಂಘದ ಅಧ್ಯಕ್ಷ ಅರಬಗಟ್ಟೆ ಬಸಪ್ಪ ಮಾತನಾಡಿ, ರೈತ ಸಂಘದ ಸಂಸ್ಥಾಪಕ ಅಧ್ಯಕ್ಷರಾಗಿದ್ದ ಬಾಬುಗೌಡ ಪಾಟೀಲರು ನಂತರದಲ್ಲಿ ಬಿಜೆಪಿಯಿಂದ ಆಯ್ಕೆಗೊಂಡು ಸಚಿವರಾಗಿ ರೈತ ಪರ ಕೆಲಸಕ್ಕೆ ಒತ್ತು ನೀಡಿದ್ದರೆಂದರು.

ಸಂಗೊಳ್ಳಿ ರಾಯಣ್ಣ ವೃತ್ತ ಹಾಗೂ ಮಿನಿ ವಿಧಾನಸೌಧದ ಎದುರು ಮಾಜಿ ಸಚಿವ ಬಾಬಾಗೌಡರ ಭಾವಚಿತ್ರಕ್ಕೆ ಪುಷ್ಪಮಾಲೆ ಹಾಕಿ ರೈತರು ಶ್ರದ್ಧಾಂಜಲಿ ಅರ್ಪಿಸಿದರು.

ಈ ಸಂದರ್ಭದಲ್ಲಿ ರೈತ ಮುಖಂಡರಾದ ಹಿರೇಮಠ ಬಸವರಾಜಪ್ಪ, ಅರಬಗಟ್ಟೆ ಬಸವನಗೌಡ, ಸುಂಕದಕಟ್ಟೆ ಕರಿಬಸಪ್ಪ, ಹೆಚ್.ಪಿ. ಶ್ರೀಹರಿ, ವಿನಯ ಹೋವಳೆ, ನೀಲಕಂಠ ಇದ್ದರು.

## ಆಕ್ಸಿಜನ್ ಫ್ಲೋ ಮೀಟರ್ ಕೊಡುಗೆ



ಕೂಡ್ಲಿಗಿ

ಕೂಡ್ಲಿಗಿ, ಮೇ 21- ಪಟ್ಟಣದ ಸ್ನೇಹಿತರ ಬಳಗದಿಂದ ಒಟ್ಟು 18 ಸಾವಿರ ರೂ.ನ 3 ಆಕ್ಸಿಜನ್ ಫ್ಲೋ ಮೀಟರ್‌ಗಳನ್ನು ಸಾರ್ವಜನಿಕ ಆಸ್ಪತ್ರೆಗೆ ಕೊಡುಗೆಯಾಗಿ ನೀಡಲಾಯಿತು. ಕೂಡ್ಲಿಗಿ ಸ್ನೇಹಿತರ ಬಳಗದ ಅಧ್ಯಕ್ಷ ಅಬ್ದುಲ್ ರೆಹಮಾನ್ ಅವರು ಇತ್ತೀಚೆಗೆ ಕೋವಿಡ್‌ನಿಂದ ಮೃತರಾದ ತಮ್ಮ ತಾಯಿ ಮೆಹರೂನ್ ಬೀ ಸ್ಮರಣಾರ್ಥ, ತಾಲ್ಲೂಕು ದಂಡಾಧಿಕಾರಿಗಳಾದ ಅನಿಲ್ ಕುಮಾರ್ ಸಮ್ಮುಖದಲ್ಲಿ ತಾಲ್ಲೂಕು ವೈದ್ಯಾಧಿಕಾರಿ ಡಾ. ಷಣ್ಮುಖ ನಾಯ್ಕ ಮತ್ತು ಡಾ. ವಿನಯ್ ಕುಮಾರ್ ಅವರಿಗೆ ಹಸ್ತಾಂತರಿಸಿದರು. ಶಾಸಕರ ಆಪ್ತ ಸಹಾಯಕ ಶ್ರೀಕಾಂತ್, ಗ್ರಾಮಲೆಕ್ಕಿಗ ನವೀನಕುಮಾರ್, ಸ್ನೇಹಿತರ ಬಳಗದ ಫಯಾಜ್, ಅಲ್ತಾಫ್ ಖಾದರ್ ಬಾಷಾ, ಮುನ್ನ ಇನ್ನಿತರರು ಹಾಜರಿದ್ದರು.

## ಹೋಂ ಐಸೋಲೇಷನ್ ಸೋಂಕಿತರು ಚೆನ್ನಮ್ಮ ಶಾಲೆಗೆ ದಾಖಲಾಗಲು ಮನವಿ



ಹರಪನಹಳ್ಳಿ ತಹಶೀಲ್ದಾರ್ ನಂದೀಶ್

ಹರಪನಹಳ್ಳಿ, ಮೇ 21- ಕೋವಿಡ್ ಸೋಂಕು ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ ಹೋಂ ಐಸೋಲೇಷನ್‌ಲ್ಲಿರುವ ಸೋಂಕಿತರಿಗೆ ಕಿತ್ತೂರು ರಾಣಿ ಚೆನ್ನಮ್ಮ ಶಾಲೆಗೆ ದಾಖಲಾಗುವಂತೆ ತಾಲ್ಲೂಕು ಆಡಳಿತದ ವತಿಯಿಂದ ತಹಶೀಲ್ದಾರ್ ಎಲ್.ಎಂ. ನಂದೀಶ್ ಮನವಿ ಮಾಡಿಕೊಂಡರು.

ಪುರಸಭೆ, ತಾಲ್ಲೂಕು ಆಡಳಿತ ಹಾಗೂ ತಾಲ್ಲೂಕು ಆರೋಗ್ಯ ಇಲಾಖೆ ವತಿಯಿಂದ ಜಂಟಿ ಸರ್ವೆ ಮಾಡಿ ಹೋಂ ಐಸೋಲೇಷನ್‌ಲ್ಲಿರುವವರನ್ನು ಕಿತ್ತೂರು ರಾಣಿ ಚೆನ್ನಮ್ಮ ಶಾಲೆಗೆ ದಾಖಲಾಗುವಂತೆ ಸೂಚಿಸಿದರು.

ಈ ವೇಳೆ ಪುರಸಭೆ ಅಧ್ಯಕ್ಷ ಮಂಜುನಾಥ ಇಜಂತಕರ್ ಮಾತನಾಡಿದರು.

ಕೊರೊನಾ ಸೋಂಕು ವ್ಯಾಪಕವಾಗಿ ಹರಡುತ್ತಿರುವ ಕಾರಣ ಸೋಂಕನ್ನು ತಡೆಗಟ್ಟುವ ನಿಟ್ಟಿನಲ್ಲಿ ಪುರಸಭೆ ವತಿಯಿಂದ ಮಹೇಶ ನರ್ಸಿಂಗ್ ಹೋಂ, ಶಿವಕೃಪ ಆಸ್ಪತ್ರೆ, ಸಿಟಿ ಹೆಲ್ತ್ ಸೆಂಟರ್, ಸನ್‌ರೈಸ್ ಬೇಬಿ ಕೇರ್ ಹೆಲ್ತ್ ಸೆಂಟರ್‌ಗಳಲ್ಲಿ ಸ್ಯಾನಿಟೈಸರ್ ಸಿಂಪರಣೆ ಮಾಡಲಾಯಿತು.

ಈ ವೇಳೆ ಪುರಸಭೆ ಸದಸ್ಯರಾದ ಕೌಟಿ ಸುಮಾ ವಾಗೀಶ, ಸಮುದಾಯ ಸಂಘಟನಾ ಅಧಿಕಾರಿ ಲೋಕ್ಯಾನಾಯ್ಕ್, ಹಿರಿಯ ಆರೋಗ್ಯಾಧಿಕಾರಿ ಮಂಜುನಾಥ, ಪುರಸಭೆಯ ಶ್ಯಾಮರಾಜ, ಉಚ್ಚೆಂಗೆಪ್ಪ ಇನ್ನಿತರರಿದ್ದರು.

## ಹೋಂ ಐಸೋಲೇಷನ್ ನಿಲ್ಲಿಸಿ

**(1ನೇ ಪುಟದಿಂದ)** ಆರಂಭಿಸಬೇಕು ಎಂದು ಹೇಳಿದರು. ಜಗಳೂರು ತಾಲ್ಲೂಕಿನಲ್ಲಿ ಐದು ವೆಂಟಿಲೇಟರ್‌ಗಳಿದ್ದು, ಬಿಡಿ ಭಾಗಗಳ ಕೊರತೆಯಿಂದಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದಾಗ ಅಸಮಾಧಾನಗೊಂಡ ಸಚಿವ ಸುಧಾಕರ್, ಎಂಟು ತಿಂಗಳ ಹಿಂದೆ ವೆಂಟಿಲೇಟರ್ ಕಳಿಸಲಾಗಿದೆ. ಇನ್ನೂ ಸಮಸ್ಯೆ ಬಗೆಹರಿಸಿಕೊಂಡಿಲ್ಲ. ಈ ಬಗ್ಗೆ ಜಿಲ್ಲಾ ಆರೋಗ್ಯಾಧಿಕಾರಿ ಸಹ ಗಮನ ಹರಿಸಿಲ್ಲ ಎಂದು ತರಾಟೆಗೆ ತೆಗೆದುಕೊಂಡರು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಬಿ.ಪಿ.ಎಲ್. ಕಾರ್ಡ್ ಹೊಂದಿರುವ ಬಡವರು ಸರ್ಕಾರಿ ಆಸ್ಪತ್ರೆಯಿಂದ ರೆಫರೆನ್ಸ್ ತಂದರೆ ಮಾತ್ರ ಖಾಸಗಿ ಆಸ್ಪತ್ರೆಗಳಲ್ಲಿ ಕೊರೊನಾ ಚಿಕಿತ್ಸೆ ಉಚಿತವಾಗಿದೆ. ರೆಫರೆನ್ಸ್ ಇಲ್ಲದೇ ಹೋದರೆ ಖಾಸಗಿ ಆಸ್ಪತ್ರೆಯಲ್ಲಿ ಮಾಡಲಾದ ವೆಚ್ಚವನ್ನು ಭರಿಸಬೇಕಿದೆ. ಇದರ ಬದಲು, ಖಾಸಗಿ ಆಸ್ಪತ್ರೆಗೆ ದಾಖಲಾದ ನಂತರವೂ ರೆಫರೆನ್ಸ್ ತರಲು ಅನುಮತಿ ನೀಡಬೇಕು ಎಂದು ಹೇಳಿದರು. ಸಭೆಯಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರುಗಳಾದ ಮಾಡಾಳ್ ವಿರುಪಾಕ್ಷಪ್ಪ, ಎಸ್.ಎ. ರವೀಂದ್ರನಾಥ್, ಪ್ರೊ. ಲಿಂಗಣ್ಣ, ಪಾಲಿಕೆ ಮೇಯರ್ ಎಸ್. ಟಿ. ವೀರೇಶ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಎಸ್ಪಿ ಹನುಮಂತರಾಯ, ಜಿಲ್ಲಾ ಪಂಚಾಯ್ತಿ ಸಿಇಓ ಡಾ. ವಿಜಯ ಮಹಾಂತೇಶ್ ಮತ್ತಿತರರು ಉಪಸ್ಥಿತರಿದ್ದರು.


**ಬಿಲ್ಡಿಂಗ್ ಬಾಡಿಗೆಗಿದೆ**

ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ : ಮೊ. : 98453 17181

**ಬೇಕಾಗಿದ್ದಾರೆ**

SBI Life Insuranceಗೆ Advisors ಬೇಕಾಗಿದ್ದಾರೆ. 30 ವರ್ಷ ಮೇಲ್ಪಟ್ಟ, SSLC/PUC ಓದಿರುವವರು ಬಂಡವಾಳವಿಲ್ಲದೆ ಪಾರ್ಟ್ ಟೈಮ್ ಕೆಲಸ ಮಾಡಿ ತಿಂಗಳಿಗೆ 30 ಸಾವಿರ ಸಂಪಾದಿಸಬಹುದು.

99009 19091

**ಜೈ ಶ್ರೀಮನ್ನಾರಾಯಣ**

ವಿಕಾಸ ತರಂಗಿಣಿ, ದಾವಣಗೆರೆ ಸ್ಫೂರ್ತಿ ಸೇವಾ ಟ್ರಸ್ಟ್

**ಪ್ರಸಾದ ದಾಸೋಹ**

ಇಂದಿನ ಪ್ರಸಾದ ವಿತರಕರು

ದಿ. ಟಿ. ವರಲಕ್ಷ್ಮಿ ಇವರ ಜ್ಞಾಪಕಾರ್ಥವಾಗಿ ಟಿ. ರಾಘವೇಂದ್ರ ಮತ್ತು ಕುಟುಂಬ ವರ್ಗದವರ ಸೇವಾರ್ಥ

ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಜೀವನ ಸಂಗಾತಿ**

ಜೀವನ ಸಂಗಾತಿ ಹುಡುಕಾಟದಲ್ಲಿರುವ ಲಿಂಗಾಯತ ಅಥವಾ ಜಾತಿಯ ಅಭ್ಯಂತರವಿಲ್ಲದ ಎಲ್ಲಾ ಬಗೆಯ ವಿಧವೆ, ವಿಧುರ, ವಿಚ್ಛೇದಿತರಿಗಾಗಿ ಸಂಪರ್ಕಿಸಿ

98807 29108

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

**ಮನೆ ಬಾಡಿಗೆ/ಲೀಸ್‌ಗೆ ಇದೆ**

ಕೊಟ್ರೂರೇಶ್ವರ ಬಡಾವಣೆ ನಿಟ್ಟುವಳ್ಳಿಯಲ್ಲಿ ಮೊದಲನೇ ಮಹಡಿಯಲ್ಲಿ ಪೂರ್ವ ದಿಕ್ಕಿನ, ಕಮೋಡ್ ಸಿಸ್ಟಂ, ಬೋರ್, ಮುನ್ಸಿಪಲ್ ನೀರಿನ ವ್ಯವಸ್ಥೆ ಇರುವ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ /ಲೀಸ್‌ಗೆ ಇದೆ.

96634 65543

**ಮನೆ ನೀರಿನ ತೊಟ್ಟಿಯನ್ನು ಸಿನ್ ಟ್ಯಾಂಕ್ ಮಿಷನ್‌ನಲ್ಲಿ ಕ್ಲೀನಿಂಗ್ ಮಾಡಲಾಗುತ್ತದೆ.**

99863 61250
91132 85992

**Work from home**

only for ladies
No registration fees,no target easy way to earn money
Contact no:
9986149737


# ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ : 20.05.2021ರಂದು ನಿಧನರಾದ

ಶ್ರೀ ಕರಿಸಿದ್ದೇಶ್ವರ ಗನ್ನಿ ಮರ್ಚೆಂಟ್ಸ್ ಮಾಲೀಕರು, ಆತ್ಮೀಯರು, ಹಿರಿಯರಾದ

**ಶ್ರೀ ಶಿವಣ್ಣ ಇಟಗಿ**

ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

**ದಿ ದಾವಣಗೆರೆ ಗನ್ನಿ ಮರ್ಚೆಂಟ್ಸ್ ಅಸೋಸಿಯೇಷನ್, ದಾವಣಗೆರೆ.**

### ಹೆಚ್.ಸಿ. ರಾಜಶೇಖರಯ್ಯ ನಿಧನ



ದಾವಣಗೆರೆ ಎಂಸಿಸಿ ಬಿ ಬ್ಲಾಕ್ ವಾಸಿ ಸ್ನೋಲ್ಯಾಂಡ್ ಐಸ್ ಕ್ರೀಂ ಪಾರ್ಲರ್ ಮಾಲೀಕರಾದ ಹೆಚ್.ಸಿ. ರಾಜಶೇಖರಯ್ಯ (82) ಅವರು ದಿನಾಂಕ : 21.05.2021ರ ಶುಕ್ರವಾರ ಬೆಳಿಗ್ಗೆ 10.30ಕ್ಕೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ, ಅಳಿಯಂದಿರು, ಸೊಸೆ ಮತ್ತು ಮೊಮ್ಮಕ್ಕಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 21.05.2021ರಂದು ಗ್ಲಾಸ್ ಹೌಸ್ ಪಕ್ಕದ ಹಿಂದೂ ರುದ್ರಭೂಮಿಯಲ್ಲಿ ನೆರವೇರಿತು.

### ಶ್ರೀಮತಿ ನಳಿನಿ ನಿಧನ



ದಾವಣಗೆರೆ ಜಯನಗರ ವಾಸಿ, ಅಯ್ಯಪ್ಪಸ್ವಾಮಿ ದೇವಸ್ಥಾನದ ಅರ್ಚಕರಾದ ಕೃಷ್ಣ ಪ್ರಸನ್ನ ಆಚಾರ್ ಅವರ ಧರ್ಮಪತ್ನಿ ಶ್ರೀಮತಿ ನಳಿನಿ (34) ಅವರು ದಿನಾಂಕ 21.5.2021ರ ಶುಕ್ರವಾರ ಮಧ್ಯಾಹ್ನ 2.30ಕ್ಕೆ ಅಕಾಲಿಕವಾಗಿ ನಿಧನರಾದರು. ಪತಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 22.5.2021ರ ಶನಿವಾರ ಹೊಸ ಬಸ್ ನಿಲ್ದಾಣದ ಪಕ್ಕದ ರುದ್ರಭೂಮಿಯಲ್ಲಿ ಬೆಳಿಗ್ಗೆ 9 ಗಂಟೆಗೆ ನೆರವೇರಿಸಲಾಗುವುದು.

### ಬಸವರಾಜಯ್ಯ ಸಿ.ಎಸ್. ನಿಧನ



ದಾವಣಗೆರೆ ತಾಲ್ಲೂಕು ಅಗಸನಕಟ್ಟೆ ಗ್ರಾಮದ ವಾಸಿ ಬಸವರಾಜಯ್ಯ ಸಿ.ಎಸ್. (46) ಅವರು ದಿನಾಂಕ 21.05.2021 ನೇ ಶುಕ್ರವಾರ ರಾತ್ರಿ 8.43 ಕ್ಕೆ ಹೃದಯಾಘಾತದಿಂದ ನಿಧನರಾದರು. ಪತ್ನಿ, ಇಬ್ಬರು ಪುತ್ರಿಯರು, 7 ಜನ ಸಹೋದರರು, ಓರ್ವ ಸಹೋದರಿ ಹಾಗೂ ಅಪಾರ ಬಂಧು - ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ನಾಳೆ ದಿನಾಂಕ 22.05.2021 ನೇ ಶನಿವಾರ ಬೆಳ್ಳಗೆ 11 ಗಂಟೆಗೆ ಸ್ವಗ್ರಾಮ ಅಗಸನಕಟ್ಟೆಯಲ್ಲಿ ನೆರವೇರಲಿದೆ.

## 99,122 ಕೋಟಿ ರೂ. ಡಿವಿಡೆಂಡ್

ಮುಂಬೈ, ಮೇ 21 – ಕೇಂದ್ರ ಸರ್ಕಾರಕ್ಕೆ 99,122 ಕೋಟಿ ರೂ. ಡಿವಿಡೆಂಡ್ ನೀಡುವುದಾಗಿ ರಿಸರ್ವ್ ಬ್ಯಾಂಕ್ ಪ್ರಕಟಿಸಿದೆ. ಇದು ನಿರೀಕ್ಷೆಗಿಂತ ಹೆಚ್ಚಿನ ಡಿವಿಡೆಂಡ್ ಆಗಿದೆ.

99,122 ಕೋಟಿ ರೂ.ಗಳ ಡಿವಿಡೆಂಡ್ ಅನ್ನು ಸರ್ಕಾರಕ್ಕೆ ನೀಡುವುದಾಗಿ ರಿಸರ್ವ್ ಬ್ಯಾಂಕ್ ಹೇಳಿದೆ. ಕೊರೊನಾ ಕಾರಣದಿಂದಾಗಿ ತೆರಿಗೆ ಸಂಗ್ರಹ ಕುಸಿತವಾಗಿರುವ ಸಮಯದಲ್ಲೇ ಈ ಬೆಳವಣಿಗೆಯಾಗಿದೆ. 2018-19ರಲ್ಲಿ ರಿಸರ್ವ್ ಬ್ಯಾಂಕ್ ಕೇಂದ್ರಕ್ಕೆ 1.76 ಲಕ್ಷ ಕೋಟಿ ರೂ. ನೀಡಿತ್ತು. ಇದರಲ್ಲಿ 1.23 ಲಕ್ಷ ಕೋಟಿ ರೂ. ಡಿವಿಡೆಂಡ್ ಇತ್ತು.

### ಕೆ.ವಿ.ದುಗ್ಗಮ್ಮ ನಿಧನ



ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್ 9ನೇ ಮೇನ್ ಬಾಪೂಜಿ ಹೈಸ್ಕೂಲ್ ಹತ್ತಿರದ ಡೋರ್ ನಂ : 3128/1ರ ವಾಸಿ ದಿ. ಕೆ.ವಿ. ಹುಚ್ಚಪ್ಪ ಇವರ ಧರ್ಮಪತ್ನಿ

**ಕೆ.ವಿ.ದುಗ್ಗಮ್ಮ**

ಇವರು ದಿನಾಂಕ 21.05.2021ರ ಶುಕ್ರವಾರ ರಾತ್ರಿ 8.35 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 72 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಮೂವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 22.05.2021 ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಪಿ.ಬಿ. ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ

**ಕೆ.ಹೆಚ್.ವೀರೇಂದ್ರ, ಡಾ ಕೆ.ಹೆಚ್. ರಾಜೀವ್ ಹಾಗೂ ಬಲ್ಲೂರು ವಂಶಸ್ಥರು**

### ಶ್ರೀಮತಿ ಶಂಕ್ರಮ್ಮ ನಿಧನ



ದಾವಣಗೆರೆ ತಾಲ್ಲೂಕು ಹೆಚ್. ಕಲಪನಹಳ್ಳಿ ವಾಸಿ ಲೇ. ಕೆ.ಜಿ.ಶರಣಪ್ಪ ಇವರ ಪತ್ನಿ ಶ್ರೀಮತಿ ಶಂಕ್ರಮ್ಮ (76) ಅವರು ದಿನಾಂಕ 21.05.2021ರ ಶುಕ್ರವಾರ ಸಂಜೆ 7 ಗಂಟೆಗೆ ನಿಧನರಾದರು. ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 22.05.2021 ರ ಶನಿವಾರ ಬೆಳಗ್ಗೆ 10 ಗಂಟೆಗೆ ಮೃತರ ತೋಟದಲ್ಲಿ ನೆರವೇರಲಿದೆ.

### ಜಿ.ಟಿ. ಕಟ್ಟೆ ಗ್ರಾಮದ ಗೌಡ್ರ ಪಟೇಲ್ ರಾಜಪ್ಪ ನಿಧನ



ಹರಿಹರ ತಾಲ್ಲೂಕು ಜಿ.ಟಿ. ಕಟ್ಟೆಗ್ರಾಮದ ವಾಸಿ ಗೌಡ್ರ ಪಟೇಲ್ ರಾಜಪ್ಪ (56) ಅವರು ದಿನಾಂಕ 21.05.2021ರ ಶುಕ್ರವಾರ ರಾತ್ರಿ 8.30ಕ್ಕೆ ನಿಧನರಾದರು. ತಾಯಿ, ಪತ್ನಿ, ಮೂವರು ಪುತ್ರರು, ಇಬ್ಬರು ಸೋದರರು, ಮೂವರು ಸಹೋದರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 22.05.2021ರ ಶನಿವಾರ ಬೆಳಿಗ್ಗೆ 9 ಗಂಟೆಗೆ ಜಿ.ಟಿ.ಕಟ್ಟೆಯಲ್ಲಿ ನೆರವೇರಲಿದೆ.

# ಕೊರೊನಾ ಸಾವುಗಳಿಗಿದೆ ಮೂರು ಪಟ್ಟಿ



**(1ನೇ ಪುಟದಿಂದ)** ಮಾಡಾಳ್ ವಿರೂಪಾಕ್ಷಪ್ಪ, ಸ್ಟಿರಾಯ್ಡ್ ಔಷಧಗಳಿಂದ ಕಿಡ್ನಿ ಹಾಗೂ ಹೃದಯಾಘಾತ ಆದರೆ ಅದನ್ನೂ ಕೊರೊನಾ ಸಾವು ಎಂದೇ ಪರಿಗಣಿಸಬೇಕು ಎಂದು ತಿಳಿಸಿದರು.

ಇದಕ್ಕೆ ಉತ್ತರಿಸಿದ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಜಿ.ಡಿ. ರಾಘವನ್, ಕೊರೊನಾ ಸಾವುಗಳೆ ಲ್ಲವನ್ನೂ ದಾಖಲಿಸಲಾಗುತ್ತಿದೆ. ಆದರೆ, ಕೊರೊನಾ ಸೋಂಕಿನಿಂದ ಬರುವ ಸಾವು, ಕೊರೊನಾ ರೀತಿಯ ಲಕ್ಷಣಗಳಿಂದ ಬರುವ ಸಾವು ಹಾಗೂ ಕೊರೊನಾ ಇದ್ದರೂ ಬೇರೆ ಕಾರಣದಿಂದ ಬರುವ ಸಾವುಗಳ ಬೇರೆ ಬೇರೆ ಮೂರು ಪಟ್ಟಿ ಇದೆ ಎಂದು ತಿಳಿಸಿದರು.

ಈ ಮೂರು ಪಟ್ಟಿಗಳ ಮಾಹಿತಿ ಸೇರಿಸಿ ಶಾಸಕರಿಗೆ ಪ್ರತಿದಿನ ಕಳಿಸಿ. ಸಾವಿನ ವರದಿ ಮುಚ್ಚಿಟ್ಟು ಸಾಧಿಸುವುದೇನಿದೆ? ಎಂದು ಆರೋಗ್ಯ ಸಚಿವ ಡಾ. ಸುಧಾಕರ್ ಹೇಳಿದರು.

## ಬೆಡ್ ನೋಡಲ್ ಅಧಿಕಾರಿ ಅಮಾನತ್ತಿಗೆ ಸೂಚನೆ

ಆಸ್ಪತ್ರೆಗಳ ಬೆಡ್‌ಗಳಿಗೆ ನೋಡಲ್ ಅಧಿಕಾರಿಯಾಗಿರುವ ಜಿಲ್ಲಾ ಕ್ರೀಡಾ ಅಧಿಕಾರಿ ಶ್ರೀನಿವಾಸ್ ಅವರನ್ನು ಅಮಾನತ್ತುಗೊಳಿಸುವಂತೆ ಆರೋಗ್ಯ ಸಚಿವ ಡಾ. ಸುಧಾಕರ್ ಅವರು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಕೊರೊನಾ ಸೋಂಕಾಗಿರುವ ವ್ಯಕ್ತಿಯೊಬ್ಬರಿಗೆ ಬೆಡ್ ಬೇಕು ಎಂದು ಶ್ರೀನಿವಾಸ್ ಅವರನ್ನು ಸಂಪರ್ಕಿಸಿದ್ದೆ. ಆದರೆ, ಬೆಡ್ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಬೆಡ್ ಒದಗಿಸಲು ಸಾಧ್ಯವಾಗದು ಎಂದೂ ಹೇಳಲಿಲ್ಲ. ಈ ನಡುವೆಯೇ ರೋಗಿ ಸಾವನ್ನಪ್ಪಿದರು ಎಂದು ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಸಭೆಯ ಗಮನಕ್ಕೆ ತಂದರು.

ಇದರಿಂದ ಅಸಮಾಧಾನಗೊಂಡ ಸಚಿವ ಸುಧಾಕರ್, ಇಂದೇ ಅಮಾನತ್ತಿಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಸೂಚನೆ ನೀಡಿದರು.

## ಶಿಕ್ಷಕರು, ಬ್ಯಾಂಕ್, ರೈಲ್ವೆ ನೌಕರರಿಗೆ ಲಸಿಕೆ

ಶಿಕ್ಷಕರು ಹಾಗೂ ಅಧಿಕಾರಿಗಳು ಕೊರೊನಾ ಕರ್ತವ್ಯ ನಿರ್ವಹಿಸುತ್ತಿದ್ದರೆ ಅವರಿಗೆ ಲಸಿಕೆ ನೀಡಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ ತಿಳಿಸಿದ್ದಾರೆ.

ಅದೇ ರೀತಿ ಬ್ಯಾಂಕ್ ಹಾಗೂ ರೈಲ್ವೆ ಉದ್ಯೋಗಿಗಳನ್ನೂ ಸಹ ಕೊರೊನಾ ವಾರಿಯರ್ ಪಟ್ಟಿಗೆ ಸೇರಿಸಿ ಲಸಿಕೆ ನೀಡಬೇಕೆಂದು ಅವರು ಸೂಚಿಸಿದ್ದಾರೆ.

# ಶಿಕ್ಷಣ ನೀತಿ ರೂಪಿಸಿದ್ದೇ ರಾಜೀವ್ ಗಾಂಧಿ



## ಜಿಲ್ಲಾ ಕಾಂಗ್ರೆಸ್‌ನಿಂದ ದಿ|| ರಾಜೀವ್‌ಗಾಂಧಿ ಪುಣ್ಯತಿಥಿ ಆಚರಣೆ

ದಾವಣಗೆರೆ, ಮೇ 21 - ದೇಶಕ್ಕೆ ಸ್ವಾತಂತ್ರ್ಯ ಸಿಕ್ಕರೂ ಸಹ ಬ್ರಿಟಿಷ್ ಶಿಕ್ಷಣದಲ್ಲಿದ್ದ ಭಾರತೀಯರಿಗೆ ಭಾರತೀಯ ಶಿಕ್ಷಣ ದೊರೆಯಬೇಕೆಂಬ ಉದ್ದೇಶದಿಂದ ದೇಶದಲ್ಲಿ ಮೊದಲ ಬಾರಿಗೆ ಭಾರತೀಯ ಶಿಕ್ಷಣವನ್ನು ರೂಪಿಸಿದ್ದು ಮಾಜಿ ಪ್ರಧಾನಮಂತ್ರಿ ರಾಜೀವ್ ಗಾಂಧಿ ಎಂದು ಉತ್ತರ ವಿಧಾನಸಭಾ ಕ್ಷೇತ್ರದ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ರಾಜೇಶ್ವರಿ ತಿಳಿಸಿದರು.

ಜಿಲ್ಲಾ ಕಾಂಗ್ರೆಸ್ ವತಿಯಿಂದ ನಗರದ ಜಿಲ್ಲಾ ಕಾಂಗ್ರೆಸ್ ಕಛೇರಿ - ಡಾ|| ಶಾಮನೂರು ಶಿವಶಂಕರಪ್ಪ ಭವನದಲ್ಲಿ ಇಂದು ಹಮ್ಮಿಕೊಂಡಿದ್ದ ಭಾರತ ರತ್ನ ರಾಜೀವ್‌ಗಾಂಧಿ ಅವರ ಪುಣ್ಯತಿಥಿ ಆಚರಣೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಭಾರತೀಯ ಶಿಕ್ಷಣ ನೀತಿ ರೂಪಿಸುವುದರ ಜೊತೆಗೆ, ವಿದೇಶಗಳಲ್ಲೂ ಭಾರತೀಯ ಶಿಕ್ಷಣಕ್ಕೆ ಮಾನ್ಯತೆ ದೊರಕಿಸಿ, ಸಾಕಷ್ಟು ಉದ್ಯೋಗಗಳನ್ನು ಸೃಜಿಸುವಲ್ಲಿ ರಾಜೀವ್ ಗಾಂಧಿ ಪ್ರಮುಖ ಪಾತ್ರ ವಹಿಸಿದ್ದರು ಎಂದ ಅವರು, ಮಹಿಳೆಯರಿಗೆ ಪಂಚಾಯತ್ ವ್ಯವಸ್ಥೆಯಲ್ಲಿ ಮೀಸಲಾತಿ ನೀಡುವ ಮೂಲಕ ಮಹಿಳೆಯರಿಗೆ ರಾಜಕೀಯ ಪ್ರಾತಿನಿಧ್ಯತೆ ಒದಗಿಸಿದರು ಎಂದು ಹೇಳಿದರು.

ಕಾಂಗ್ರೆಸ್ ಯುವ ಘಟಕದ ಪ್ರಧಾನ ಕಾರ್ಯದರ್ಶಿ ಸೈಯದ್ ಖಾಲಿದ್ ಮಾತನಾಡಿ, ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗಾಗಿ ನವೋದಯ ಶಾಲೆಗಳನ್ನು ದೇಶಾದ್ಯಂತ ತೆರೆದರು. ಭಾರತದ ಮಾಹಿತಿ ತಂತ್ರಜ್ಞಾನ ಮತ್ತು ದೂರ ಸಂಪರ್ಕ, ದೂರದರ್ಶನ, ವಿದ್ಯುನ್ಮಾನ ಉಪಯೋಗದ ಕ್ರಾಂತಿಯ ಪಿತಾಮಹ ರಾಜೀವ್‌ಗಾಂಧಿ ಎಂದು ಬಣ್ಣಿಸಿದರು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಮಾತನಾಡಿ, ದೇಶದಲ್ಲಿ ಕಂಪ್ಯೂಟರ್ ಮತ್ತು ಇಂಟರ್ ನೆಟ್ ಕ್ರಾಂತಿಯನ್ನು ಮಾಡಿದವರು ರಾಜೀವ್ ಗಾಂಧಿ ಅವರು. ಆದರೆ ಇಂದು ದೇಶದ ಚುಕ್ಕಾಣಿ ಹಿಡಿದವರು ಅಂಬಾನಿ, ಅದಾನಿ ಅವರಿಗೆ ಅನುಕೂಲ ಮಾಡಲು ಇಂಟರ್ ನೆಟ್ ಸೇವೆಯನ್ನು ದುರ್ಬಳಕೆ ಮಾಡಿಕೊಳ್ಳ ಲಾಗುತ್ತಿದ್ದಾರೆ. ಇಂದಿನ ಭಾರತದ ಕಷ್ಟ ಕಾಲದಲ್ಲಿ ರಾಜೀವ್ ಗಾಂಧಿ ಅವರು ಇದ್ದಿದ್ದರೆ ಕೊರೊನಾ ವಿರುದ್ಧ ಹೋರಾಟಕ್ಕೆ ಯುವ ಸಮುದಾಯವನ್ನು ಸಜ್ಜುಗೊಳಿಸುತ್ತಿದ್ದರು ಎಂದರು.

ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್, ಕಾಂಗ್ರೆಸ್ ಅಧ್ಯಕ್ಷ ಅಯೂಬ್, ಸುರಭಿ ಶಿವಮೂರ್ತಿ, ಮಹಿಳಾ ಕಾಂಗ್ರೆಸ್‌ನ ದಾಕ್ಷಾಯಿಣಮ್ಮ, ಬಾಷಾ, ಮೊಟ್ಟೆ ದಾದಾಪೀರ್, ಯುವರಾಜ್, ಅಲಿ ರೆಹಮತ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಖಾಸಗಿ ಬೆಡ್ ಕೊಡದಿದ್ರೆ ಕ್ರಮ

**(1ನೇ ಪುಟದಿಂದ)** ಮಾತ್ರ ಖಾಸಗಿ ಆಸ್ಪತ್ರೆ, ಮೆಡಿಕಲ್ ಕಾಲೇಜುಗಳು ಚಿಕಿತ್ಸೆ ನೀಡಬೇಕು. ಇತರೆ ಚಿಕಿತ್ಸೆಗಳನ್ನು 2-3 ತಿಂಗಳು ಮುಂದೂಡಬೇಕು ಎಂದು ಸುಧಾಕರ್ ತಿಳಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಜೆ.ಜೆ.ಎಂ.ಸಿ. ಕಾಲೇಜಿನ ಪ್ರಾಂಶುಪಾಲ ಡಾ. ಕುಮಾರ್, ಜಿಲ್ಲಾಡಳಿತದ ಆದೇಶದಂತೆ ಬಾಪೂಜಿ ಆಸ್ಪತ್ರೆಯಲ್ಲಿ ಕೋವಿಡ್ ಹಾಗೂ ನಾನ್ ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸುಧಾಕರ್, ಸರ್ಕಾರದ ಆಡಳಿತವನ್ನು ಜಿಲ್ಲಾಧಿಕಾರಿ ದುರ್ಬಲಗೊಳಿಸಲು ಬರುವುದಿಲ್ಲ. ಬೇಕೆಂದರೆ ಇನ್ನಷ್ಟು ಬಲಗೊಳಿಸಬಹುದು ಎಂದರು.

ಆಗ ಉತ್ತರಿಸಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಸರ್ಕಾರದ ಆದೇಶವನ್ನು ಪಾಲಿಸಿದ್ದೇವೆ. ಬೆಡ್‌ಗಳನ್ನು ಕೊಡದೇ ಇರುವ ಬಗ್ಗೆ ಕಾರಣ ಕೇಳಿ ನೋಟಿಸ್ ಕಳಿಸಲಾಗಿದೆ ಎಂದು ಹೇಳಿದರು.

ಈ ಬಗ್ಗೆ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ನಮಗೆ ಜನರ ಪ್ರಾಣ ರಕ್ಷಣೆ ಮುಖ್ಯ. ಖಾಸಗಿ ವೈದ್ಯಕೀಯ ಕಾಲೇಜುಗಳ ಬೆಡ್ ಗಳು ಬಡವರಿಗೆ ದೊರೆಯಬೇಕು ಎಂದು ಹೇಳಿದರು.

ಈ ಬಗ್ಗೆ ಉತ್ತರಿಸಿದ ಎಸ್.ಎಸ್.ಐ.ಎಂ.ಎಸ್. ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ. ಪ್ರಸಾದ್ ಹಾಗೂ ಜೆ.ಜೆ.ಎಂ.ಸಿ. ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ. ಕುಮಾರ್, ಕೊರೊನಾ ರೋಗಿಗಳಿಗೆ ಬೆಡ್‌ಗಳನ್ನು ಒದಗಿಸಿದ್ದೇವೆ. ತುರ್ತು ಸಂದರ್ಭಗಳು ಎದುರಾದಾಗ ಬೆಡ್‌ಗಳ ಅಗತ್ಯವಿರುತ್ತದೆ. ಈ ಬಗ್ಗೆ ನೀವೇ ಆಡಳಿತ ಮಂಡಳಿ ಜೊತೆ ಮಾತನಾಡಿ ಎಂದು ಸ್ಪಷ್ಟನೆ ನೀಡಿದರು.

# ವಾರಿಯರ್ಸ್‌ಗಳಿಗೆ ಊಟ ವಿತರಣೆ



ಮಲೇಬೆನ್ನೂರು, ಮೇ 21- ಇಲ್ಲಿನ ಪೊಲೀಸರಿಗೆ, ಸಮುದಾಯ ಆರೋಗ್ಯ ಕೇಂದ್ರದ ವೈದ್ಯರಿಗೆ, ಸಿಬ್ಬಂದಿಗಳಿಗೆ, ಆಶಾ ಕಾರ್ಯಕರ್ತರಿಗೆ ಮತ್ತು ಪುರಸಭೆಯ ಪೌರ ಕಾರ್ಮಿಕರಿಗೆ, ಕಛೇರಿಯ ಅಧಿಕಾರಿಗಳಿಗೆ, ಸಿಬ್ಬಂದಿಗಳಿಗೆ ಹರಿಹರ ಎಪಿಎಂಸಿ ಮಾಜಿ ಅಧ್ಯಕ್ಷ, ಹಾಲಿ ಸದಸ್ಯ ಮಲ್ಲನಾಯ್ಕನಹಳ್ಳಿಯ ಗೌಡ್ರ ಶೇಖರಪ್ಪ ಮತ್ತು ಶ್ರೀಮತಿ ಸತ್ಯವತಿ ದಂಪತಿ ಮಧ್ಯಾಹ್ನದ ಊಟ ನೀಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಪುರಸಭೆ ಮುಖ್ಯಾಧಿಕಾರಿ ದಿನಕರ್, ಉಪ ತಹಶೀಲ್ದಾರ್ ಆರ್. ರವಿ, ಪಿಎಸ್ಐ ವೀರಬಸಪ್ಪ, ವೈದ್ಯ ಡಾ.ನಿಸಾರ್, ವರ್ತಕ ಚಿಟ್ಟಕ್ಕಿ ನಾಗರಾಜ್, ಕುಂಬಳೂರಿನ ಹಳೇಮನೆ ಶಂಭುಲಿಂಗಪ್ಪ, ಬಣಕಾರ್ ವಿಜಯಕುಮಾರ್ ಈ ವೇಳೆ ಹಾಜರಿದ್ದರು.

## ಓದುಗರ ಪತ್ರ

### ಹಾವು ಸಾಯದ, ಕೋಲು ಮುರಿಯದ ಲಾಕ್‌ಡೌನ್ ಬೇಡ

**ಮಾನ್ಯರೇ,**

ಇತ್ತ ಸಾಯಲು ಬಿಡದೆ, ಅತ್ತ ಬದುಕಲು ಬಿಡದೆ, ಅಡ್ಡಗೋಡೆಯ ಮೇಲೆ ದೀಪ ಇಟ್ಟಂತಾಗಿರುವ ಸರ್ಕಾರದ ಈ ರೂಲ್ಸ್‌ಗಳು ಮುಂದುವರೆಯುವುದು ಬೇಡ.

ಈ ದೇಶದಲ್ಲಿ ಸಂಪತ್ತು ಕೆಲವರ ಪಾಲಿಗೆ ಮಾತ್ರ ಸೀಮಿತವಾಗಿದೆ. ಹಲವರ ಸ್ಥಿತಿ ಆ ದಿನವೇ ದುಡಿದು, ಆ ದಿನವೇ ಜೀವನ ನಡೆಸುತ್ತಿರುವವ ರಾಗಿದ್ದು, ಯಾವ ಕ್ರೂರಿಗೂ ಬೇಡ ಅವರ ಪಾಡು. ಇದ್ದವರಿಗೂ ಹಂಚಿ ತಿನ್ನುವ ಮಾನವೀಯತೆ ಇಲ್ಲ. ಪರಿಸ್ಥಿತಿ ಹೀಗಿರುವಾಗ ಸಿಲಿಂಡರ್, ಅಡುಗೆ ಎಣ್ಣೆ, ಪೆಟ್ರೋಲ್ ದಿನನಿತ್ಯ ಉಪಯೋಗಿಸುವ ಎಲ್ಲಾ ಸಾಮಗ್ರಿಗಳ ಬೆಲೆ ಏರಿಸಿ, ಪ್ರತಿ ತಿಂಗಳು ಬಡವರಿಗೆ ಸಿಗುವ ಅಕ್ಕಿಯನ್ನು ಕಡಿಮೆ ಮಾಡಿ, ಸಾಯಲು ಬಿಡದೆ, ಬದುಕಲು ಬಿಡದೆ ಲಾಕ್‌ಡೌನ್ ಮಾಡಿದ್ದು ಸರಿಯಲ್ಲ.

ಮೊದಲ ಹಂತದ ಲಾಕ್‌ಡೌನ್‌ನಲ್ಲೇ ಲಕ್ಷಾಂತರ ಜನ ಕೆಲಸ ಕಳೆದುಕೊಂಡು ನಿರುದ್ಯೋಗಿಗಳಾಗಿ ಕೊರೊನಾ ನೆರಳಲ್ಲಿ ನರಳುತ್ತಿದ್ದಾರೆ. ಕಲಾವಿದರ ಗೋಳು ಕೇಳುವವರಿಲ್ಲ. ಬಟ್ಟೆ ಅಂಗಡಿ, ಗಾರ್ಮೆಂಟ್ಸ್, ಹೋಟೆಲ್ ಇನ್ನೂ ಹಲವು ಕ್ಷೇತ್ರಗಳಲ್ಲಿ ಕೆಲಸ ಮಾಡುವವರ ಪಾಡು ಹೇಳುವಂತಿಲ್ಲ.

ದುರಂತವೆಂದರೆ ನಾವು ಆರಿಸಿ, ಕಳುಹಿಸಿದ ನಮ್ಮ ನಾಯಕರುಗಳು ನಗರಗಳು ಮತ್ತು ಹಳ್ಳಿಯ ಕಡೆ ಮುಖ ಮಾಡಿಲ್ಲ. ಇದೇ ರೀತಿ ಲಾಕ್‌ಡೌನ್ ಮುಂದುವರೆದರೆ ಇದ್ದವರನ್ನು ಹಸಿದವರು ಕಿತ್ತು ತಿನ್ನುವ ಕಾಲ ಬಂದರೂ ಬರಬಹುದು. ಈಗಲಾದರೂ ಸರ್ಕಾರ ಎಚ್ಚೆತ್ತು ಕೊಂಡು, ನಿರ್ಗತಿಕರಿಗೆ ರೇಷನ್, ಪ್ರತಿ ಮನೆಗೂ 2000 ರೂ.ಗಳನ್ನು ಕೊಟ್ಟು 15 ದಿನಗಳ ಕಾಲ ಕಠಿಣ ಲಾಕ್‌ಡೌನ್ ಮಾಡಿ. ಇಲ್ಲವಾದರೆ ಅವರ ಸಾವು-ನೋವಿನ ಬಗ್ಗೆ ಅವರಿಗೆ ಬಿಡಿ. ಎಲ್ಲಾದರೂ ದುಡಿದು ತಿನ್ನುತ್ತಾರೆ. ಹಾವು ಸಾಯದ, ಕೋಲು ಮುರಿಯದ ಲಾಕ್‌ಡೌನ್ ಬೇಡ.

**- ಮಂಜುನಾಥ್ ಹೊಳೆಸಿರಿಗೆರೆ**
ದಾವಣಗೆರೆ.

# ಮಾಯಕೊಂಡದಲ್ಲಿ ಆಮ್ಲಜನಕ ಘಟಕ ಸ್ಥಾಪನೆಗೆ ಶಾಸ್ತ್ರಿ ಒತ್ತಾಯ



ದಾವಣಗೆರೆ, ಮೇ 21- ಮಾಯಕೊಂಡ ಗ್ರಾಮದಲ್ಲಿ ಆಮ್ಲಜನಕ ಘಟಕ ಸ್ಥಾಪನೆ ಮಾಡುವಂತೆ ಮಾಯಕೊಂಡ ಪುರ ಅಭಿವೃದ್ಧಿ ಕ್ರಿಯಾಶೀಲ ವೇದಿಕೆ ಅಧ್ಯಕ್ಷರೂ ಆದ ಹಿರಿಯ ರೈತ ಮುಖಂಡ ಎಂ.ಎಸ್.ಕೆ ಶಾಸ್ತ್ರಿ ಶಾಸಕರನ್ನು ಒತ್ತಾಯಿಸಿದ್ದಾರೆ.

ಆಮ್ಲಜನಕ ಘಟಕ ಸ್ಥಾಪನೆಯಿಂದಾಗಿ ಇಲ್ಲಿನ ಸರ್ಕಾರಿ ಆಸ್ಪತ್ರೆಯು ಮೇಲ್ದರ್ಜೆಗೇರಿ ನಾಲ್ವರು ವೈದ್ಯರು ಹಾಗೂ 24 ನರ್ಸ್‌ಗಳು ಕಾರ್ಯ ನಿರ್ವಹಿಸಲು ಅನುಕೂಲವಾಗುತ್ತದೆ ಎಂದು ಶಾಸ್ತ್ರಿ ಅಭಿಪ್ರಾಯಪಟ್ಟಿದ್ದಾರೆ. ಕೋವಿಡ್ ನಿಯಂತ್ರಣಕ್ಕಾಗಿ ಪ್ರತಿಯೊಬ್ಬ ಶಾಸಕರಿಗೂ 2 ಕೋಟಿ ರೂ.ಗಳನ್ನು ಮುಖ್ಯಮಂತ್ರಿ ಯಡಿಯೂರಪ್ಪ ಬಿಡುಗಡೆ ಮಾಡಿದ್ದಾರೆ. ಅದರಂತೆ ಮಾಯಕೊಂಡ ವಿಧಾನಸಭಾ ಕ್ಷೇತ್ರಕ್ಕೂ ಅನುದಾನ ಬಂದಿರುತ್ತದೆ. ಇದರಲ್ಲಿ 95 ಲಕ್ಷ ರೂ. ಬಳಕೆ ಮಾಡಿ ಸರ್ಕಾರಿ ಆಸ್ಪತ್ರೆಯಲ್ಲಿ ಆಮ್ಲಜನಕ ತಯಾರಿಕಾ ಘಟಕ ಸ್ಥಾಪನೆಗೆ ಮುಂದಾಗಲಿ ಎಂದು ಆಗ್ರಹಿಸಿದ್ದಾರೆ.

# ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷರಿಂದ ಮದ್ಯದ ಪಾರ್ಟಿ: ಪ್ರಕರಣ ದಾಖಲು

ದಾವಣಗೆರೆ, ಮೇ 21- ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ ಅವರು ಹರಿಹರ ತಾಲ್ಲೂಕು ಕೊಂಡಜ್ಜಿ ಗ್ರಾಮದ ಸ್ಕೌಟ್ ಅಂಡ್ ಗೈಡ್ ಕೇಂದ್ರದ ಕಟ್ಟಡದಲ್ಲಿ ನಡೆಸಿದರೆನ್ನಲಾದ ಮದ್ಯದ ಪಾರ್ಟಿಯ ವಿಡಿಯೋ ವೈರಲ್ ಆಗಿದೆ.

ವಿಧಾನ ಪರಿಷತ್ ಸದಸ್ಯ ಮೋಹನ್ ಕೊಂಡಜ್ಜಿ ಅವರ ಸಹೋದರನ ಮಗ ಮತ್ತು ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ ಅವರು ಹಾಡುಹಗಲೇ ನಡೆಸಿದ್ದಾರೆನ್ನಲಾದ ಮದ್ಯದ ಪಾರ್ಟಿಯು ಸರ್ಕಾರಿ ಕಟ್ಟಡದಲ್ಲಿ ನಡೆದಿದ್ದಕ್ಕೆ ಸ್ಥಳೀಯ ಯುವಕರಿಂದ ವಿರೋಧ ವ್ಯಕ್ತವಾಗಿದೆ. ಅದಕ್ಕೆ ಪಾರ್ಟಿಯಲ್ಲಿದ್ದವರು 'ಯಾರನ್ನು ಕರೆಸುತ್ತೀಯೋ ಕರೆಸೋ' ಎಂದು ಹೇಳಿರುವುದು ಆಕ್ರೋಶಕ್ಕೆ ಕಾರಣವಾಗಿದೆ.

ನಿಖಿಲ್ ಕೊಂಡಜ್ಜಿ ಕಳೆದ ತಿಂಗಳು ಮದುವೆಯಾಗಿದ್ದು, ಮದುವೆ ಪಾರ್ಟಿ ನೀಡಲು ಮೊನ್ನೆ ಸರ್ಕಾರಿ ಕಟ್ಟಡ ಬಳಸಿದ್ದಾರೆ. ಈ ರೀತಿ ಪಾರ್ಟಿ ಮಾಡಿದ ನಿಖಿಲ್ ಕೋವಿಡ್ ನಿಯಮಾವಳಿ ಉಲ್ಲಂಘಿಸಿದ್ದಾರೆ ಎಂದು ಆರೋಪಿಸಲಾಗಿದೆ. ಈ ಸಂಬಂಧ ಹರಿಹರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ವಾಸವಿ ಜಯಂತಿ ವಿಭಿನ್ನವಾಗಿ ಆಚರಣೆ



ದಾವಣಗೆರೆ, ಮೇ 21- ಕೊರೊನಾ ಸೋಂಕು ಹಿನ್ನೆಲೆಯಲ್ಲಿ ಆಗಿರುವ ಲಾಕ್ ಡೌನ್ ಪರಿಣಾಮ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ ಸಂಘದ ವತಿಯಿಂದ ವಾಸವಿ ಜಯಂತಿಯನ್ನು ಇಂದು ವಿಭಿನ್ನವಾಗಿ ಆಚರಿಸಲಾಯಿತು. ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ಸರಳವಾಗಿ ಶ್ರೀ ಅಮ್ಮನವರಿಗೆ ಹೂವಿನ ಅಲಂಕಾರದೊಂದಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ಅಲ್ಲದೇ, ಆಶ್ರಯ ಹಿರಿಯ ವನಿತೆಯರ ಆನಂದಧಾಮ ಮತ್ತು ಶ್ರೀ ಓಂಕಾರ ಹುಚ್ಚನಾಗಲಿಂಗ ಸ್ವಾಮಿ ಅನಾಥ ಸೇವಾಶ್ರಮದಲ್ಲಿ ಪ್ರಸಾದ ನೀಡಲಾಯಿತು. ಜೊತೆಗೆ, ಆವರಗೆರೆ ಜೈನ್ ಗೋಶಾಲೆಗೆ 2 ಟ್ರ್ಯಾಕ್ಟರ್ ಹುಲ್ಲನ್ನು ನೀಡುವ ಮೂಲಕ ವಾಸವಿ ಜಯಂತಿಯನ್ನು ವಿಶೇಷವಾಗಿ ಆಚರಿಸಲಾಯಿತು ಎಂದು ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ ಸಂಘದ ಅಧ್ಯಕ್ಷ ಆರ್.ಎಲ್. ಪ್ರಭಾಕರ್ ತಿಳಿಸಿದ್ದಾರೆ.


**ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ**
**ಹಿರಿಯ ಕ್ಷೇತ್ರಾಧೀಕ್ಷಕರು**
ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ,
ಕತ್ತಲಗೆರೆ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ. ಮೊ: 94808 38983

ಸಂ.ಕೃ.ತೋ.ಸಂ.ಕೇ.ಕ/30/2021-22 ದಿನಾಂಕ: 21.05.2021

**ಟೆಂಡರ್ ಪ್ರಕಟಣೆ**

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಕತ್ತಲಗೆರೆಯಲ್ಲಿ 2020-21 ನೇ ಸಾಲಿನ ಬೇಸಿಗೆ ಹಂಗಾಮಿನಲ್ಲಿ ನಾಟಿ ಮಾಡಿರುವ 58 ಎಕರೆಯಲ್ಲಿನ ಭತ್ತವನ್ನು ಕಟಾವು ಮಾಡಬೇಕಾಗಿರುವುದರಿಂದ ಆಸಕ್ತಿಯುಳ್ಳ ಭತ್ತ ಕಟಾವು ಮಾಡುವ ಯಂತ್ರದ ಮಾಲೀಕರು ಅಥವಾ ಗುತ್ತಿಗೆದಾರರು / ಕೂಲಿ ಕಾರ್ಮಿಕರು ಪ್ರತಿ ಗಂಟೆಯ / ಪ್ರತಿ ಎಕರೆಯ ಕೆಲಸಕ್ಕೆ ತಮ್ಮ ದರವನ್ನು ಲಿಖಿತ ಮೂಲಕ ದಿನಾಂಕ 29.05.2021 ರೊಳಗೆ ಹಿರಿಯ ಕ್ಷೇತ್ರಾಧೀಕ್ಷಕರು, ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಕತ್ತಲಗೆರೆ ಇವರ ಹೆಸರಿಗೆ ಸೀಲ್ಡ್ ಲಕೋಟೆಯಲ್ಲಿ ಸಲ್ಲಿಸಬೇಕಾಗಿ ತಿಳಿಯಪಡಿಸಲಾಗುತ್ತದೆ ಹಾಗೂ ಲಕೋಟೆ ಮೇಲೆ ತಮ್ಮ ಅಂಚೆ ವಿಳಾಸವನ್ನು ನಮೂದಿಸಬೇಕಾಗಿ ತಿಳಿಯಪಡಿಸಲಾಗುತ್ತದೆ.

ಸಹಿ/-
**ಹಿರಿಯ ಕ್ಷೇತ್ರಾಧೀಕ್ಷಕರು**
ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಕತ್ತಲಗೆರೆ-577219, ಚನ್ನಗಿರಿ ತಾಲ್ಲೂಕು,


# ಬ್ಲಾಕ್ ಫಂಗಸ್ ಸಾಂಕ್ರಾಮಿಕವಲ್ಲ

**ಸಚಿವ ಸುಧಾಕರ್**

ದಾವಣಗೆರೆ, ಮೇ 21 - ಬ್ಲಾಕ್ ಫಂಗಸ್ ಸೋಂಕು ಸಾಂಕ್ರಾಮಿಕ ರೋಗವಲ್ಲ. ಆದ್ದರಿಂದ ಯಾರೂ ಕೂಡ ಆತಂಕ ಪಡುವ ಅಗತ್ಯವಿಲ್ಲ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಅವರು ಹೇಳಿದ್ದಾರೆ.

ಜಿಲ್ಲೆಯಲ್ಲಿಯೂ ಈವರೆಗೆ 15 ರಿಂದ 20 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ. ರಾಜ್ಯದ ಎಲ್ಲ ಜಿಲ್ಲಾ ಆಸ್ಪತ್ರೆಗಳಲ್ಲಿ ಸೋಂಕಿಗೆ ಚಿಕಿತ್ಸೆ ದೊರಕುವಂತೆ ಮಾಡಲಾಗಿದೆ. ಸೋಂಕು ನಿವಾರಣೆಗೆ ಅಗತ್ಯವಿರುವ ಔಷಧಿ ಪೂರೈಕೆಗೂ ಕ್ರಮ ವಹಿಸಲಾಗಿದೆ ಎಂದು ಇಂದಿಲ್ಲಿ ಪತ್ರಕರ್ತರಿಗೆ ತಿಳಿಸಿದರು. ರೋಗ ನಿರೋಧಕ ಶಕ್ತಿ ಕಡಿಮೆ ಇರುವವರು, ಕೊರೊನಾ ಚಿಕಿತ್ಸೆಯಲ್ಲಿ ಅತಿಯಾದ ಸ್ಟಿರಾಯ್ಡ್ ಬಳಕೆ, ಅನಿಯಂತ್ರಿತ ಮಧುಮೇಹ ಮುಂತಾದ ಕಾರಣಗಳಿಂದ ಈ ಸೋಂಕು ಉಂಟಾಗುತ್ತಿದೆ ಎಂದವರು ತಿಳಿಸಿದ್ದಾರೆ.

# ರೋಗಿಗಳಿಗೆ ದಾಸೋಹ : ಪರಮೇಶ್ವರ ಗೌಡರಿಂದ ದಾನ, ತರಳಬಾಳು ಜಗದ್ಗುರುಗಳ ಸೇವೆಗೆ ಪ್ರಶಂಸೆ



ದಾವಣಗೆರೆ, ಮೇ 21- ಲಾಕ್ ಡೌನ್ ಸಂದರ್ಭದಲ್ಲಿ ಕೊರೊನಾ ಸೋಂಕಿತರು, ಬಡವರು, ರೋಗಿಗಳಿಗೆ ತರಳಬಾಳು ಸೇವಾ ಸಮಿತಿ ಮತ್ತು ಶಿವಸೈನ್ಯ ಯುವಕರ ಸೇವಾ ಸಂಘ ನೀಡುತ್ತಿರುವ ನಿರಂತರ ದಾಸೋಹ ಕಾರ್ಯಕ್ರಮಕ್ಕೆ ನಗರದ ಎಪಿಎಂಸಿ ದಲಾಲರ ಸಂಘದ ಅಧ್ಯಕ್ಷರು ಹಾಗು ಸಾಧು ಸದ್ಧರ್ಮ ಸಂಘದ ವಿಶೇಷ ಆಹ್ವಾನಿತರಾದ ಗಡಿಗುಡಾಳು ಜಿ.ಎಸ್. ಪರಮೇಶ್ವರ ಗೌಡರು ದಾನ ಮಾಡಿದ್ದಾರೆ.

ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನಕ್ಕೆ ನಿನ್ನೆ ಭೇಟಿ ನೀಡಿದ್ದ ಅವರು, ಯುವಕರ ಸೇವಾ ಕಾರ್ಯಕ್ರಮವನ್ನು ಪ್ರಶಂಸಿಸಿದರಲ್ಲದೇ, ಈ ಕಾರ್ಯಕ್ಕೆ ಮಾರ್ಗದರ್ಶನ ಮಾಡುತ್ತಿರುವ ತರಳಬಾಳು ಜಗದ್ಗುರುಗಳಿಗೆ ಭಕ್ತಿಪೂರ್ವಕ ಧನ್ಯವಾದ ಹೇಳಿದರು. ಈ ಸಂದರ್ಭದಲ್ಲಿ ಶಶಿಧರ್ ಹೆಮ್ಮನಬೇತೂರು ಮತ್ತಿತರರು ಉಪಸ್ಥಿತರಿದ್ದರು.

# ಬಂಬೂ ಬಜಾರ್‌ನಲ್ಲಿ ಬಾಲಕನ ಮೇಲೆ ಹಂದಿ ದಾಳಿ



ದಾವಣಗೆರೆ, ಮೇ 21- ನಗರದ ಬಂಬೂ ಬಜಾರ್ ರಸ್ತೆಯಲ್ಲಿ ಗಣೇಶ್ ಎಂಬ ಬಾಲಕನ ಮೇಲೆ ಆಕಸ್ಮಿಕವಾಗಿ ಹಂದಿ ದಾಳಿ ನಡೆಸಿರುವ ಘಟನೆ ಇಂದು ನಡೆದಿದೆ. ಈ ಹಿನ್ನೆಲೆಯಲ್ಲಿ ಮಹಾನಗರ ಪಾಲಿಕೆಯ 19 ನೇ ವಾರ್ಡಿನ ಸದಸ್ಯ ಆರ್.ಎಲ್. ಶಿವಪ್ರಕಾಶ್ ಅವರು ಸ್ಥಳಕ್ಕೆ ಧಾವಿಸಿ ಬಾಲಕನ ಆರೋಗ್ಯ ವಿಚಾರಿಸಿ, ಹಂದಿ ಹಾವಳಿಯ ಬಗ್ಗೆ ಸಾರ್ವಜನಿಕರಿಂದ ಮಾಹಿತಿಯನ್ನು ಪಡೆದರು. ಅಲ್ಲದೆ ಪಾಲಿಕೆ ಸದಸ್ಯರು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.


**ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು**

ರಾಜ್ಯ ಬಿಜೆಪಿ ಕೈಗಾರಿಕಾ ಪ್ರಕೋಷ್ಠದ ಸದಸ್ಯರೂ,
ಜಿಲ್ಲಾ ವಾಲ್ಮೀಕಿ ಯುವ ಘಟಕದ
ಸಂಸ್ಥಾಪಕ ಸದಸ್ಯರೂ,
ನಾಯಕ ವಿದ್ಯಾರ್ಥಿ ನಿಲಯದ ನಿರ್ದೇಶಕರೂ,
ಶ್ರೀರಾಮುಲು ಸೈನ್ಯದ ಜಿಲ್ಲಾಧ್ಯಕ್ಷರೂ,
ಬಿಜೆಪಿ ಜಿಲ್ಲಾ ಎಸ್ಟಿ ಮೋರ್ಚಾ
ಮಾಜಿ ಅಧ್ಯಕ್ಷರೂ,
ಸಂಘಟನಾ ಚತುರರೂ ಹಾಗೂ
ನಮ್ಮೆಲ್ಲರ ಆತ್ಮೀಯರೂ ಆದ



**ಡಿ.ಜಿ. ಮಂಜುನಾಥ್**

ಅವರಿಗೆ 40ನೇ ಜನ್ಮ ದಿನದ
ಹಾರ್ದಿಕ ಶುಭಾಶಯಗಳು.
ಶ್ರೀಯುತರಿಗೆ ಭಗವಂತನು
ಆಯುರಾರೋಗ್ಯ ಭಾಗ್ಯ
ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

ಶುಭ ಕೋರುವವರು :

**ಸಮರ್ಥ ಗ್ರೂಪ್ಸ್ ಮತ್ತು ವೀರ ಮದಕರಿ ಫ್ರೆಂಡ್ಸ್ ಗ್ರೂಪ್,**
**3ನೇ ಮೇನ್, 10ನೇ ಕ್ರಾಸ್, ಗಣಪತಿ ಸೇವಾ ಸಮಿತಿ**
**ಹಿಂದೂ ಮಹಾಗಣಪತಿ ಟ್ರಸ್ಟ್**
**ರಾಂ & ಕೋ ಸರ್ಕಲ್ ಗೆಳೆಯರ ಬಳಗ**
**ಶ್ರೀ ವಿದ್ಯಾಗಣಪತಿ ಸೇವಾ ಸಂಘ (ಪಿಸಾಳೆ ಕಾಂಪೌಂಡ್)**
**ವಜ್ರ ಯುವಕರ ಸಂಘ, ಮುದ್ದಳ್ಳಿ ತೋಟ**
**ವಿನೋಬನಗರ, ದಾವಣಗೆರೆ.**

*ಮನೆಯಲ್ಲೇ ಸುರಕ್ಷಿತವಾಗಿರಿ, ಕೊರೊನಾದಿಂದ ಮುಕ್ತರಾಗಿರಿ.*

# ಕುಂಟು ನೆಪವೊಡ್ಡಿ ರಸ್ತೆಗಿಳಿದವರಿಗೆ ಬ್ರೇಕ್

## ಪಾಲಿಕೆ, ಕಂದಾಯ, ಪೊಲೀಸ್ ಅಧಿಕಾರಿಗಳ ಬಿಗಿ ಕ್ರಮ



ದಾವಣಗೆರೆ, ಮೇ 21- ಜಿಲ್ಲಾಡಳಿತ ಬಿಗಿ ನಿಯಮ, ಪೊಲೀಸರ ಎಚ್ಚರಿಕೆ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಸಂಪೂರ್ಣ ಲಾಕ್‌ಡೌನ್ ಹೇರಿದ್ದರೂ ಸಹ ಕುಂಟುನೆಪ ಹೇಳಿಕೊಂಡು ಪದೇಪದೇ ಮನೆಯಿಂದ ಹೊರಗೆ ಬಂದು ತರಕಾರಿ, ಸೊಪ್ಪು, ಔಷಧಿ, ಆಸ್ಪತ್ರೆ ಎಂದು ಹೇಳಿಕೊಂಡು ಸುಖಾಸುಮ್ಮನೇ ಓಡಾಡುತ್ತಿದ್ದ ಜನರಿಗೆ ಬ್ರೇಕ್ ಬಿದ್ದಂತಾಗಿದೆ.

ಇಂದು ಬೆಳಿಗ್ಗೆ 6ರಿಂದ 10 ಗಂಟೆಯವರೆಗೆ ಅಗತ್ಯ ವಸ್ತುಗಳ ಖರೀದಿಗೆ ಜಿಲ್ಲಾಡಳಿತದಿಂದ ಅವಕಾಶ ಕಲ್ಪಿಸಿ ಕೊಡಲಾಗಿತ್ತು. ತದನಂತರ ಎಲ್ಲವನ್ನೂ ಬಂದ್ ಮಾಡಿಸಿತ್ತು. 10 ಗಂಟೆಯಿಂದಲೇ ಪಾಲಿಕೆ ಅಧಿಕಾರಿಗಳು ಸಿಬ್ಬಂದಿಗಳ ಜೊತೆಗೆ ಪೊಲೀಸ್ ಸಿಬ್ಬಂದಿಗಳು ಆಯಾ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿನ ಪ್ರಮುಖ ರಸ್ತೆಗಳಲ್ಲಿ ಮಾತ್ರವಲ್ಲದೇ ಸಣ್ಣ ರಸ್ತೆಗಳಲ್ಲಿ ಸಂಚರಿಸಿ ಅಲ್ಲಲ್ಲಿ ತೆರೆದಿದ್ದ ಸಣ್ಣಪುಟ್ಟ ಅಂಗಡಿಗಳನ್ನು ಮುಚ್ಚಿಸಲು ಸೂಚನೆ ನೀಡಿದರು. ಅಲ್ಲದೇ ಶನಿವಾರದಿಂದ ಸೋಮವಾರದ ಬೆಳಿಗ್ಗೆವರೆಗೂ ಯಾವುದೇ ಕಾರಣಕ್ಕೂ ಅಂಗಡಿ ಮುಂಗಟ್ಟುಗಳನ್ನು ತೆರೆಯದಂತೆ ಎಚ್ಚರಿಕೆ ನೀಡಿದರು.

ಇನ್ನು ನಗರದ ಕೆಲವು ಪ್ರಮುಖ ರಸ್ತೆಗಳು, ವೃತ್ತದಲ್ಲಿ ಪೊಲೀಸರು, ಗೃಹ ರಕ್ಷಕ ದಳದ ಸಿಬ್ಬಂದಿ, ಪಾಲಿಕೆ ಸಿಬ್ಬಂದಿಗಳು ಅನಗತ್ಯವಾಗಿ ಓಡಾಡುತ್ತಿದ್ದ ವಾಹನಗಳನ್ನು ತಡೆದು ನಿಲ್ಲಿಸಿ ತಪಾಸಣೆ ನಡೆಸಿ ಎಚ್ಚರಿಕೆ ನೀಡಿ ಕಳುಹಿಸಿ ಕೊಟ್ಟರು. ಇನ್ನು ವಾಗ್ವಾದಕ್ಕೆ ಇಳಿದ ಕೆಲವರಿಗೆ ಲಾಠಿ ರುಚಿ ಬದಲು ಕೈ ರುಚಿ ತೋರಿಸಿ, ತಿಳುವಳಿಕೆ ನೀಡಿ ಬಿಟ್ಟರು. ಆದರೂ ಜನತೆ ಸುಖಾ ಸುಮ್ಮನೆ ಓಡಾಡುತ್ತಿದ್ದ ಬಗ್ಗೆ ಪೊಲೀಸರು ಅಸಮಾಧಾನ ವ್ಯಕ್ತಪಡಿಸಿದರು.

ಮನೆಯಿಂದ ಬೇಕಾಬಿಟ್ಟಿ ಹೊರಗೆ ಬರಬೇಡಿ, ಕೊರೊನಾ ಹಚ್ಚಿಕೊಂಡು ನೀವೂ ಸಾಯ ಬೇಡಿ, ನಿಮ್ಮವರನ್ನೂ ಸಾಯಿಸಬೇಡಿ, ನಿಮ್ಮನ್ನು ನಂಬಿಕೊಂಡವರನ್ನು ಅನಾಥರನ್ನಾಗಿ ಮಾಡಬೇಡಿ, ಸತ್ತರೆ ನಿಮಗೆ ಕೊಳ್ಳಿ ಇಡಲು ಅಥವಾ ಮಣ್ಣು ಮಾಡಲು ನಿಮ್ಮವರೇ ಇಲ್ಲದ ಪರಿಸ್ಥಿತಿ ಎದುರಾಗುತ್ತದೆ ಎಂದು ಮುನ್ನೆಚರಿಸಿದರು.

# ಬೆಳ್ಳಂಬೆಳಿಗ್ಗೆ ಕೊಳ್ಳಲು ಮುಗಿ ಬಿದ್ದ ಜನತೆ



ದಾವಣಗೆರೆ, ಮೇ 21- ಇಂದು ಬೆಳಿಗ್ಗೆಯಿಂದ ಸೋಮವಾರದ ಬೆಳಿಗ್ಗೆವರೆಗೂ ಜಿಲ್ಲಾಡಳಿತ ಕಠಿಣ ಲಾಕ್‌ಡೌನ್ ಜಾರಿಗೊಳಿಸಿದ ಬೆನ್ನಲ್ಲೇ ಜನತೆ ಶುಕ್ರವಾರ ಬೆಳಿಗ್ಗೆ ಅಗತ್ಯ ವಸ್ತುಗಳ ಖರೀದಿಗೆ ಮುಗಿಬಿದ್ದಿದ್ದರು. ನಗರದ ಪ್ರಮುಖ ರಸ್ತೆಗಳಲ್ಲಿನ ದಿನಸಿ ಅಂಗಡಿಗಳು, ತರಕಾರಿ, ಸೊಪ್ಪು, ಚಿಕನ್, ಮಟನ್, ಮೀನು, ಮೊಟ್ಟೆ ಸೇರಿದಂತೆ ಕೃಷಿ ಉತ್ಪನ್ನಗಳನ್ನು ಖರೀದಿಸಲು ನಾ ಮುಂದು, ತಾ ಮುಂದು ಎನ್ನುವಂತೆ ನಿಂತಿದ್ದರು.

ಇನ್ನು ಅಂಗಡಿಯವರೂ ಸಹ ತಮ್ಮ ವ್ಯಾಪಾರ ಕೇಂದ್ರಗಳ ಮುಂದೆ ನಿಂತಿದ್ದ ಗ್ರಾಹಕರಿಗೆ ಮಾಸ್ಕ್ ಹಾಕಿಕೊಳ್ಳುವಂತೆ, ಸಾಮಾಜಿಕ ಅಂತರ ಕಾಯ್ದುಕೊಳ್ಳುವಂತೆ ಹೇಳದೇ ತಮ್ಮ ಪಾಡಿಗೆ ತಾವು ವ್ಯಾಪಾರ ಮಾಡುವಲ್ಲಿ ನಿರತರಾಗಿದ್ದರು. ಯಾವುದೇ ಕಡೆಗಳಲ್ಲೂ ಸೋಂಕು ನಿವಾರಕ ದ್ರಾವಣ ಕಂಡು ಬರಲಿಲ್ಲ.

ಇದಲ್ಲದೇ ಜನರು ಲಾಕ್‌ಡೌನ್ ನೋಡಲೆಂದೇ ತಮಗೆ ಸೋಂಕು ಹರಡುತ್ತದೇ ಎನ್ನುವುದನ್ನೇ ಮರೆತು ಬೇಕಾಬಿಟ್ಟಿ ಓಡಾಟ ನಡೆಸುತ್ತಿದ್ದರು. ಸುಖಾಸುಮ್ಮನೆ ನಿಂತು ಹರಟೆ ಹೊಡೆಯುವಲ್ಲಿ ನಿರತರಾಗಿದ್ದರು. ಗಂಟೆಗಟ್ಟಲೇ ಮಾತನಾಡುತ್ತಾ ನಿಂತಿದ್ದರು. ಆದರೆ 10ಗಂಟೆ ಹತ್ತಿರ ಆಗುತ್ತಿದ್ದಂತೆ ಎಚ್ಚರಿಕೆ ಗಂಟೆ ಹೊಡೆದವರಂತೆ ಆತುರದಿಂದಲೇ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ಇನ್ನು ರಸ್ತೆಯಲ್ಲಿ ವಾಹನಗಳ ಸಂಚಾರವೂ ಸಹ ಹೆಚ್ಚಾಗಿ ಕಂಡು ಬಂತು, ನಂತರ ಕಡಿಮೆ ಆಯಿತು.

**10ರ ನಂತರ ಬಿಕೋ ಎನ್ನುತ್ತಿದ್ದ ರಸ್ತೆಗಳು:** ಲಾಕ್‌ಡೌನ್ ಹಿನ್ನೆಲೆಯ್ಲಲಿ ಪ್ರತಿನಿತ್ಯ ಬೆಳಿಗ್ಗೆ ಜನ ಜಂಗುಳಿಯಿಂದ ಇರುತ್ತಿದ್ದ ರಸ್ತೆಗಳು 10ಗಂಟೆಯ ನಂತರ ಬಿಕೋ ಎನ್ನುತ್ತಿದ್ದವು. ಮನೆಯಿಂದ ಆಚೆ ಬಂದು ಸುಖಾಸುಮ್ಮನೆ ವಾಹನಗಳಲ್ಲಿ ಓಡಾಡಿದರೆ ಕೇಸು ಬೀಳಬಹುದೆಂಬ ಭೀತಿ, ಅಲ್ಲದೇ ತಮಗೆ ಬೀಳಬಹುದಾದ ದಂಡ ಇತ್ಯಾದಿ ಕಾರಣಗಳಿಂದ ಬೆದರಿದ ಸಾರ್ವಜನಿಕರು ನಗರದ ಬಹುತೇಕ ಕಡೆ ಮನೆಯಿಂದ ಹೊರ ಬಾರದೆ ತಮಗೆ ತಾವೇ ಸ್ವಯಂ ನಿರ್ಬಂಧ ಹಾಕಿಕೊಂಡಿದ್ದು ವಿಶೇಷವಾಗಿತ್ತು.

ಲಾಕ್‌ಡೌನ್ ಜಾರಿಯಲ್ಲಿದ್ದರೂ ಅಷ್ಟಿಷ್ಟು ಜನರಿಂದ ಇರುತ್ತಿದ್ದ ನಗರದ ಪ್ರಮುಖ ವಾಣಿಜ್ಯ ರಸ್ತೆಗಳಾದ ಕೆ.ಆರ್.ಮಾರುಕಟ್ಟೆ, ಎಪಿಎಂಸಿ, ಹಳೇ ದಾವಣಗೆರೆಯ ಕೆಲವು ರಸ್ತೆಗಳು ಬಿಕೋ ಎನ್ನುತ್ತಿದ್ದವು. ವಾಹನ ಮತ್ತು ಜನರ ಸಂಚಾರ ವಿರಳವಾಗಿತ್ತು. ಇದಲ್ಲದೇ ನಗರದ ಎಲ್ಲಾ ಪ್ರಮುಖ ವೃತ್ತಗಳಲ್ಲಿ ಕಂದಾಯ ಇಲಾಖೆ, ಪಾಲಿಕೆ ಮತ್ತು ಪೊಲೀಸ್ ಇಲಾಖೆಗಳು ಜಂಟಿಯಾಗಿ ಕಾರ್ಯಾಚರಣೆ ನಡೆಸಿ, ಅನಗತ್ಯವಾಗಿ ಓಡಾಟ ನಡೆಸುತ್ತಿದ್ದವರಿಗೆ ಎಚ್ಚರಿಕೆ ನೀಡಿ ಕಳುಹಿಸುತ್ತಿದ್ದರು.

ನಗರದ ಎಲ್ಲಾ ವೃತ್ತಗಳಲ್ಲಿ, ಮುಖ್ಯ ರಸ್ತೆಗಳಲ್ಲಿ ಬ್ಯಾರಿಕೇಡ್‌ಗಳನ್ನು ಹಾಕಲಾಗಿತ್ತು. ದ್ವಿಪಥ ರಸ್ತೆಗಳನ್ನು ಬಂದ್ ಮಾಡಿ ಕೇವಲ ಏಕಮುಖವಾಗಿ ಸಂಚರಿಸುವಂತೆ ವಾಹನ ಸವಾರರಿಗೆ ಸೂಚಿಸಲಾಗುತ್ತಿತ್ತು. ಯಾವುದೇ ವೃತ್ತಗಳಲ್ಲಿ ಪೊಲೀಸರು ಕಂಡು ಬರಲಿಲ್ಲ.

ಅಗತ್ಯ ವಸ್ತುಗಳ ಖರೀದಿಗೆ ಬೆಳಿಗ್ಗೆ 10 ಗಂಟೆಯೊಳಗೆ ಅವಕಾಶ ಕಲ್ಪಿಸಲಾಗಿತ್ತು. ಅದರಂತೆ ಸಾರ್ವಜನಿಕರು ತಮ್ಮ ಕೆಲಸ ಮುಗಿಸಿಕೊಂಡು ತಮ್ಮ ತಮ್ಮ ಮನೆಗಳತ್ತ ಸಾಗಿದರು. ನಗರದ ಕೆಎಸ್‌ಆರ್‌ಟಿಸಿ ಬಸ್‌ನಿಲ್ದಾಣ, ಖಾಸಗಿ ಬಸ್‌ನಿಲ್ದಾಣ, ಮಾರುಕಟ್ಟೆ ಪ್ರದೇಶಗಳು, ಆಟೋನಿಲ್ದಾಣಗಳು ಸೇರಿದಂತೆ ಜನ ನಿಬಿಡ ಪ್ರದೇಶಗಳಲ್ಲಿ ಅಘೋಷಿತ ಬಂದ್ ವಾತಾವರಣ ನಿರ್ಮಾಣವಾಗಿತ್ತು.

# ಜಾರಿಗೆ ತರಲಾಗದ ಆದೇಶ ಹೊರಡಿಸಬಾರದು

## ಅಲಹಾಬಾದ್ ಹೈಕೋರ್ಟ್ ನಿರ್ದೇಶನಗಳಿಗೆ ಸುಪ್ರೀಂ ಕೋರ್ಟ್ ತಡೆ

ನವದೆಹಲಿ, ಮೇ 21 – ಜಾರಿಗೆ ತರಲು ಸಾಧ್ಯವಾಗದ ಆದೇಶಗಳನ್ನು ಹೈಕೋರ್ಟ್‌ಗಳು ಹೊರಡಿಸಬಾರದು ಎಂದು ಅಭಿಪ್ರಾಯ ಪಟ್ಟಿರುವ ಸುಪ್ರೀಂ ಕೋರ್ಟ್, ಉತ್ತರ ಪ್ರದೇಶದಲ್ಲಿ ಕೊರೊನಾ ನಿರ್ವಹಣೆಗೆ ಸಂಬಂಧಿಸಿದಂತೆ ಅಲಹಾಬಾದ್ ಹೈಕೋರ್ಟ್ ಹೊರಡಿಸಿದ ಆದೇಶಕ್ಕೆ ತಡೆಯಾಜ್ಞೆ ಹೊರಡಿಸಿದೆ.

ನ್ಯಾಯಮೂರ್ತಿ ವಿನೀತ್ ಶರಣ್ ಹಾಗೂ ಬಿ.ಆರ್. ಗವಾಯಿ ಅವರನ್ನು ಒಳಗೊಂಡ ಪೀಠವು ಮೇ 17ರಂದು ಹೈಕೋರ್ಟ್ ಹೊರಡಿಸಿದ್ದ ಆದೇಶದಲ್ಲಿ ತಿಳಿಸಿರುವುದನ್ನು ನಿರ್ದೇಶನಗಳೆಂದು ಭಾವಿಸದೇ, ಸಲಹೆಗಳೆಂದು ಭಾವಿಸಬೇಕೆಂದು ಉತ್ತರ ಪ್ರದೇಶ ಸರ್ಕಾರಕ್ಕೆ ತಿಳಿಸಿದೆ.

ಹೈಕೋರ್ಟ್ ಆದೇಶದಲ್ಲಿ ಕೆಲ ಟಿಪ್ಪಣಿಗಳನ್ನು ಮಾಡಿರುವುದು ಸಾರ್ವಜನಿಕರಿಗೆ ನೆರವು ನೀಡುವ ತವಕದಿಂದ ಎಂದು ಸುಪ್ರೀಂ ಕೋರ್ಟ್ ಹೇಳಿದ್ದು, ಹೈಕೋರ್ಟ್ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರ್ಕಾರ ಜನತೆಗೆ ಸೌಲಭ್ಯಗಳನ್ನು ಕಲ್ಪಿಸುವತ್ತ ಕಾರ್ಯ ನಿರ್ವಹಿಸಬೇಕು ಎಂದು ತಿಳಿಸಿದೆ.

ಇದೇ ವೇಳೆ, ಹೈಕೋರ್ಟ್‌ಗಳು ಯಾವುದೇ ನಿರ್ದೇಶನಗಳನ್ನು ನೀಡುವಾಗ, ಅವುಗಳನ್ನು ಜಾರಿಗೆ ತರಲು ಸಾಧ್ಯವಿದೆಯೇ ಎಂಬುದನ್ನು ಪರಿಗಣಿಸಬೇಕು. ಜಾರಿಗೆ ತರಲು ಸಾಧ್ಯವಾಗದ ನಿರ್ದೇಶನ ಹೊರಡಿಸುವುದರಿಂದ ದೂರವಿರಬೇಕು ಎಂದು ತಿಳಿಸಿದೆ.

ನಾವು ಹೈಕೋರ್ಟ್ ಆದೇಶವನ್ನು ತಡೆಯುತ್ತಿದ್ದೇವೆ. ಆದರೆ, ಹೈಕೋರ್ಟ್ ಎದುರು ನಡೆಯುತ್ತಿರುವ ವಿಚಾರಣೆಯನ್ನು ತಡೆಯುವುದಿಲ್ಲ ಎಂದು ಹೇಳಿರುವ ಸುಪ್ರೀಂ ಕೋರ್ಟ್, ಈ ವಿಷಯದಲ್ಲಿ ಸಹಕರಿಸಲು ಹಿರಿಯ ವಕೀಲ ನಿದೇಶ್ ಗುಪ್ತ ಅವರನ್ನು ಅಮಿಕಸ್ ಕ್ಯೂರಿ ಆಗಿ ನೇಮಿಸಿದೆ.

ಕೊರೊನಾ ವಿಷಯದ ನಿರ್ವಹಣೆ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪರಿಣಾಮ ಬೀರುತ್ತದೆ. ಈ ವಿಷಯವನ್ನು ಸುಪ್ರೀಂ ಕೋರ್ಟ್ ಪರಿಗಣಿಸುವಾಗ, ಹೈಕೋರ್ಟ್ ವ್ಯವಹರಿಸಬಾರದು ಎಂದೂ ಸಹ ಸರ್ವೋಚ್ಛ ನ್ಯಾಯಾಲಯ ಹೇಳಿದೆ.

ಉತ್ತರ ಪ್ರದೇಶದ ಪ್ರತಿಯೊಂದು ಹಳ್ಳಿಗೆ ಕನಿಷ್ಠ ಎರಡು ಐ.ಸಿ.ಯು. ಸೌಲಭ್ಯದ ಆಂಬ್ಯುಲೆನ್ಸ್ ಒದಗಿಸಬೇಕು ಎಂದು ಅಲಹಾಬಾದ್ ಹೈಕೋರ್ಟ್ ನಿರ್ದೇಶನ ನೀಡಿತ್ತು. ಉತ್ತರ ಪ್ರದೇಶದಲ್ಲಿ 97 ಸಾವಿರ ಹಳ್ಳಿಗಳಿವೆ. ಹೀಗಿರುವಾಗ ಒಂದು ತಿಂಗಳಲ್ಲೇ ಇಷ್ಟೊಂದು ಆಂಬ್ಯುಲೆನ್ಸ್ ಕಲ್ಪಿಸುವುದು ಮಾನವಾತೀತ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಇನ್ನೊಂದು ನಿರ್ದೇಶನ ನೀಡಿದ್ದ ಹೈಕೋರ್ಟ್, ಐದು ವೈದ್ಯಕೀಯ ಕಾಲೇಜುಗಳನ್ನು ನಾಲ್ಕು ತಿಂಗಳಲ್ಲಿ ಪಿ.ಜಿ ವೈದ್ಯಕೀಯ ಸಂಸ್ಥೆಗಳಾಗಿ ಉನ್ನತೀಕರಿಸಬೇಕು ಎಂದು ತಿಳಿಸಿತ್ತು. ಆದರೆ, ಇಷ್ಟು ಅಲ್ಪ ಅವಧಿಯಲ್ಲಿ ಆದೇಶ ಪಾಲನೆ ಕಾರ್ಯಸಾಧುವಲ್ಲ ಎಂದು ರಾಜ್ಯ ಸರ್ಕಾರ ತಿಳಿಸಿತ್ತು.

ರಾಜ್ಯ ಸರ್ಕಾರದ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಶಾರ್ ಮೆಹ್ತ, ಹೈಕೋರ್ಟ್‌ನ ಹಲವಾರು ಪೀಠಗಳು ಕೊರೊನಾಗೆ ಸಂಬಂಧಿಸಿದಂತೆ ಬೇರೆ ಬೇರೆ ಆದೇಶ ಹೊರಡಿಸುತ್ತಿವೆ. ಇದನ್ನು ಸುಪ್ರೀಂ ಕೋರ್ಟ್ ತಡೆಯಬೇಕು ಎಂದು ಮನವಿ ಮಾಡಿಕೊಂಡರು. ಆದರೆ, ಸಾರಾ ಸಗಟಾಗಿ ನಿರ್ದೇಶನ ನೀಡಲು ಸಾಧ್ಯವಾಗದು. ಇದರಿಂದ ಹೈಕೋರ್ಟ್ ಹಾಗೂ ರಾಜ್ಯ ಸರ್ಕಾರಗಳ ಸ್ಥೈರ್ಯ ಕುಂದಿಸಿದಂತಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

# ಆಕ್ಸಿಜನ್ ಬಳಕೆ ಸಮಿತಿ ರಚನೆಗೆ ಸೂಚನೆ



ದಾವಣಗೆರೆ, ಮೇ 21 - ಜಿಲ್ಲೆಯಲ್ಲಿ ಆಕ್ಸಿಜನ್ ಬಳಕೆ ಬಗ್ಗೆ ನಿಗಾ ವಹಿಸಬೇಕು. ಅಗತ್ಯವಿದ್ದಷ್ಟು ಪ್ರಮಾಣದಲ್ಲಿ ಮಾತ್ರ ಆಕ್ಸಿಜನ್ ಬಳಕೆಗಾಗಿ ವೈದ್ಯರು ಹಾಗೂ ತಂತ್ರಜ್ಞರ ಸಮಿತಿ ರಚಿಸಬೇಕು ಎಂದು ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ತಿಳಿಸಿದ್ದಾರೆ.

ಜಿಲ್ಲೆಯ ಚಿಗಟೇರಿ ಆಸ್ಪತ್ರೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಈ ಸೂಚನೆ ನೀಡಿರುವ ಅವರು, ಪ್ರತೀ ಆಸ್ಪತ್ರೆಗಳಲ್ಲೂ ಬಳಕೆಯಾಗುವ ಆಕ್ಸಿಜನ್ ಮಾಹಿತಿಯನ್ನು ಕಲೆ ಹಾಕಿ ಜಿಲ್ಲಾಡಳಿತಕ್ಕೆ ಮಾಹಿತಿ ನೀಡಬೇಕು ಎಂದರು.


ಈ ಸಂದರ್ಭದಲ್ಲಿ ಸಚಿವರಿಗೆ ಮಾಹಿತಿ ನೀಡಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಆಕ್ಸಿಜನ್ ನಿರ್ವಹಣೆಗಾಗಿ ಜಿಲ್ಲೆಗೆ ಒಬ್ಬ ಬಯೋಮೆಡಿಕಲ್ ಇಂಜಿನಿಯರ್ ಅಗತ್ಯವಿದೆ ಎಂದು ತಿಳಿಸಿದರು. ವೈದ್ಯಕೀಯ ಕಾಲೇಜುಗಳಲ್ಲಿರುವ ಬಯೋಮೆಡಿಕಲ್ ಇಂಜಿನಿಯರ್ ಕರೆಸಿಕೊಂಡು ಸಮರ್ಪಕವಾಗಿ ಬಳಸಿಕೊಳ್ಳುವಂತೆ ಹೇಳಿದರು.

ಜಿಲ್ಲೆಯಲ್ಲಿ ಈಗಾಗಲೇ ವಾರ್‌ರೂಂ ಮಾಡಿದ್ದು 6-7 ಜನರು ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರಿಗೆ 20 ಮೊಬೈಲ್‌ಗಳನ್ನು ಕೊಡಿಸಲಾಗಿದೆ. ಅದರ ಮೂಲಕ ಕಾಂಟ್ಯಾಕ್ಟ್ ಟ್ರೇಸಿಂಗ್, ಬೆಡ್ ಮ್ಯಾನೇಜ್‌ಮೆಂಟ್ ಹೀಗೆ ಕೋವಿಡ್‌ಗೆ ಸಂಬಂಧಿಸಿದಂತೆ ಎಲ್ಲಾ ಮಾಹಿತಿಗಳನ್ನು ತೆಗೆದುಕೊಳ್ಳಲಾಗುತ್ತದೆ. ಹಾಗೂ ಕೋವಿಡ್ ಹೆಲ್ಪ್ ಲೈನ್ ನಂಬರ್ ನಮೂದಿಸಿದ್ದು ಸಾರ್ವಜನಿಕರು ಈ ನಂಬರ್ ಮೂಲಕ ಬೆಡ್‌ಗಳನ್ನು ಕೇಳಿ ಪಡೆಯುತ್ತಾರೆ ಎಂದು ಬೀಳಗಿ ತಿಳಿಸಿದರು.

ಇದಕ್ಕೆ ಆರೋಗ್ಯ ಸಚಿವರು ಪ್ರತಿಕ್ರಿಯಿಸಿ, ವಾರ್‌ರೂ ಗೆ 3 ಶಿಫ್ಟ್‌ಮಾ ಡಿ. ಪ್ರತಿ ಶಿಫ್ಟ್‌ಗೆ 50 ಜನರನ್ನು ನೇಮಿಸಬೇಕು. ಇದಕ್ಕೆ ಅಂತಿಮ ವರ್ಷದ ಎಂ.ಬಿ.ಬಿ.ಎಸ್ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಿ. ಹಾಗೂ 4 ಸಂಖ್ಯೆಯುಳ್ಳ ಕೋವಿಡ್ ಹೆಲ್ಪ್‌ಲೈನ್ ನಂಬರ್ ಅನ್ನು ಕ್ಲೌಡ್ ಕನೆಕ್ಟ್ ಮಾಡಿ ಸಾರ್ವಜನಿಕರಿಗೆ ತಲುಪಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಉಸ್ತುವಾರಿ ಸಚಿವ ಭೈರತಿ ಬಸವರಾಜ, ಸಂಸದರಾದ ಜಿ.ಎಂ.ಸಿದ್ದೇಶ್ವರ, ಶಾಸಕ ಪ್ರೊ.ಲಿಂಗಣ್ಣ, ಮಹಾನಗರ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಜಿಲ್ಲಾ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ್, ಎಸಿ ಮಮತ ಹೊಸಗೌಡರ್, ಕೋವಿಡ್ ನೋಡಲ್ ಅಧಿಕಾರಿ ಪ್ರಮೋದ್ ನಾಯಕ್ ಹಾಗೂ ಆರೋಗ್ಯ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಬ್ಯಾಂಕುಗಳ ಸಿಬ್ಬಂದಿಗಳಿಗೆ ಪ್ರತ್ಯೇಕವಾಗಿ ಕೋವಿಡ್ ಲಸಿಕೆ ನೀಡಲು ಒತ್ತಾಯ




ದಾವಣಗೆರೆ,ಮೇ 21- ಬ್ಯಾಂಕುಗಳ ಸಿಬ್ಬಂದಿಗಳ ಹಿತದೃಷ್ಟಿಯಿಂದ ಕೋವಿಡ್ ಲಸಿಕೆಯನ್ನು ಪ್ರತ್ಯೇಕವಾಗಿ ನೀಡುವಂತೆ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ಉಪ ಪ್ರಧಾನ ವ್ಯವಸ್ಥಾಪಕ ಬಿ.ಎಸ್. ಮಲ್ಲೇಶ್ ಅವರು ಜಿಲ್ಲಾಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

ದೇಶದ ಆರ್ಥಿಕತೆಯು ಮುಖ್ಯ ಭಾಗ ಭಾಗವಾಗಿರುವ ಬ್ಯಾಂಕಿಂಗ್ ಉದ್ಯಮವು ಪ್ರಸ್ತುತ ಅತ್ಯಂತ ಕ್ಲಿಷ್ಟಕರ ಪರಿಸ್ಥಿತಿಯಲ್ಲಿದೆ. ಕೊರೊನಾ ವೈರಸ್ ಹಿನ್ನೆಲೆಯಲ್ಲಿ ಆಗಿರುವ ಲಾಕ್ ಡೌನ್ ನಿಂದ ದೇಶವು ಆರ್ಥಿಕ ಸವಾಲನ್ನು ಎದುರಿಸುತ್ತಿರುವ ಜೊತೆಗೆ, ಬ್ಯಾಂಕಿಂಗ್ ಉದ್ಯಮದ ಮೇಲೂ ಪರಿಣಾಮ ಬೀರಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

ಲಾಕ್ ಡೌನ್ ನಂತಹ ಪರಿಸ್ಥಿತಿಯಲ್ಲೂ ಬ್ಯಾಂಕುಗಳ ಸಿಬ್ಬಂದಿಗಳು ದೇಶದ ಆರ್ಥಿಕತೆಗೆ ದಕ್ಕೆ ಬರ ದಂತೆ ಮತ್ತು ಗ್ರಾಹಕರ ಸೇವೆ ಯಲ್ಲಿ ಯಾವುದೇ ವ್ಯತ್ಯಯವಾಗ ದಂತೆ ತಮ್ಮ ಆರೋಗ್ಯವನ್ನೂ ಲೆಕ್ಕಿಸದೇ ನಿರಂತರವಾಗಿ ತಮ್ಮನ್ನು ಸೇವೆಯಲ್ಲಿ ತೊಡಗಿಸಿ ಕೊಂಡಿದ್ದಾರೆ ಎಂದು ಅವರು ಹೇಳಿದ್ದಾರೆ.

ಈ ಹಿನ್ನೆಲೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಬ್ಯಾಂಕಿನ ಸಿಬ್ಬಂದಿ ವರ್ಗವನ್ನು 'ಫ್ರಂಟ್ ಲೈನ್ ಕೊರೊನಾ ವಾರಿಯರ್ಸ್' ಎಂದು ಮೆಚ್ಚುಗೆ ವ್ಯಕ್ತಪ ಡಿಸಿ, ದೇಶದ ಎಲ್ಲಾ ಬ್ಯಾಂಕ್ ಸಿಬ್ಬಂದಿಗಳಿಗೆ ಪ್ರತ್ಯೇಕ ಲಸಿಕೆ ನೀಡುವಂತೆ ಕರೆ ನೀಡಿದ್ದಾರೆ.

ಪ್ರಧಾನ ಮಂತ್ರಿಗಳ ಕರೆಯನ್ನು ಪರಿಗಣಿಸಿ, ಬ್ಯಾಂಕ್ ಸಿಬ್ಬಂದಿಗಳಿಗೆ ಪ್ರತ್ಯೇಕ ಲಸಿಕೆ ನೀಡಲು ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಶಿಫಾರಸ್ಸು ಮಾಡುವಂತೆ ಮಲ್ಲೇಶ್ ಅವರು ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಿದ್ದಾರೆ.

## ಹರಿಹರ ತಾಲ್ಲೂಕಿನಲ್ಲಿ ಇಂದು 116 ಪಾಸಿಟಿವ್

ಹರಿಹರ, ಮೇ 21- ತಾಲ್ಲೂಕಿನಲ್ಲಿ ಇಂದು 116 ಕೊರೊನಾ ಪಾಸಿಟಿವ್ ಕೇಸ್ ದೃಢಪಟ್ಟಿದೆ. ಗುತ್ತೂರು ಕೋವಿಡ್ ಕೇರ್ ಸೆಂಟರ್‌ನಲ್ಲಿ 110 ಮತ್ತು ಸರ್ಕಾರಿ ಆಸ್ಪತ್ರೆಯಲ್ಲಿ 60 ಸೋಂಕಿತರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಒಟ್ಟು 529 ಸಕ್ರಿಯ ಪ್ರಕರಣಗಳು ಇವೆ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಚಂದ್ರಮೋಹನ್ ತಿಳಿಸಿದ್ದಾರೆ.

## ರಾಜ್ಯದಲ್ಲಿ ಕೊರೊನಾ ಸಾವುಗಳು ಇಳಿಕೆ

ಬೆಂಗಳೂರು, ಮೇ 21 – ರಾಜ್ಯದಲ್ಲಿ ಕೊರೊನಾ ಸೋಂಕಿನಿಂದ ಸಂಭವಿಸುವ ದೈನಂದಿನ ಸಾವುಗಳ ಸಂಖ್ಯೆ ಶುಕ್ರವಾರದಂದು 353ಕ್ಕೆ ಇಳಿಕೆಯಾಗಿದೆ. ರಾಜ್ಯದಲ್ಲಿ ಈ ದಿನ 32,218 ಸೋಂಕಿತರು ಕಂಡು ಬಂದಿದ್ದರೆ, 52,581 ಜನ ಸೋಂಕಿನಿಂದ ಗುಣವಾಗಿದ್ದಾರೆ ಎಂದು ರಾಜ್ಯ ಆರೋಗ್ಯ ಇಲಾಖೆ ತಿಳಿಸಿದೆ.

ಕಳೆದ ಮೂರು ದಿನಗಳಲ್ಲಿ ರಾಜ್ಯದಲ್ಲಿ 548, 468 ಹಾಗೂ 525 ಸಾವುಗಳು ವರದಿಯಾಗಿದ್ದವು ಎಂದು ಇಲಾಖೆ ಹೇಳಿದೆ.

ಬೆಂಗಳೂರು ನಗರ ಒಂದರಲ್ಲೇ 9,591 ಸೋಂಕಿತರು ಕಂಡು ಬಂದಿದ್ದಾರೆ ಹಾಗೂ ನಗರದಲ್ಲಿ 26,956 ಜನ ಗುಣವಾಗಿ ಬಿಡುಗಡೆಯಾಗಿದ್ದಾರೆ ಎಂದು ತಿಳಿಸಲಾಗಿದೆ.

## 681 ಪಾಸಿಟಿವ್, 1 ಸಾವು

ದಾವಣಗೆರೆ, ಮೇ 21- ಜಿಲ್ಲೆಯಲ್ಲಿ ಶುಕ್ರವಾರ 681 ಜನರಲ್ಲಿ ಸೋಂಕು ದೃಢಪಟ್ಟಿದ್ದು, ಓರ್ವ ಪುರುಷ ಸಾವನ್ನಪ್ಪಿದ್ದ ಬಗ್ಗೆ ಜಿಲ್ಲಾಡಳಿತದ ಪ್ರಕಟಣೆ ತಿಳಿಸಿದೆ.

525 ಜನರು ಸೋಂಕಿನಿಂದ ಗುಣಮುಖರಾಗಿದ್ದು, ಸಕ್ರಿಯ ಸೋಂಕಿತರ ಸಂಖ್ಯೆ 4912ಕ್ಕೆ ಏರಿಕೆಯಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ 326, ಹರಿಹರ 101, ಜಗಳೂರು 30, ಚನ್ನಗಿರಿ 100, ಹೊನ್ನಾಳಿ 115 ಹಾಗೂ ಹೊರ ಜಿಲ್ಲೆಯ ಐವರಲ್ಲಿ ಸೋಂಕು ದೃಢಪಟ್ಟಿದೆ. ಚಿಗಟೇರಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಹೊನ್ನಾಳಿ ತಾಲ್ಲೂಕು ಕೊಡಚಗೊಂಡನಹಳ್ಳಿಯ 72 ವರ್ಷದ ಪುರುಷ ಸೋಂಕಿನಿಂದ ಮೃತಪಟ್ಟಿದ್ದಾರೆ.

# ಆಕ್ಸಿಜನ್ ಘಟಕಕ್ಕೆ ಶಂಕುಸ್ಥಾಪನೆ




ಹೊನ್ನಾಳಿ, ಮೇ 21- ಆಕ್ಸಿಜನ್‌ಗಾಗಿ ಪ್ರತಿನಿತ್ಯ ಕೊರೊನಾ ಸೋಂಕಿತರು, ಸಾರ್ವಜನಿಕರು, ವೈದ್ಯರುಗಳು ಆತಂಕ ಪಡುತ್ತಿದ್ದರು. ಇದೀಗ ಆಸ್ಪತ್ರೆಯ ಆವರಣದಲ್ಲೇ ಆಕ್ಸಿಜನ್ ಉತ್ಪಾದನಾ ಘಟಕ ಆರಂಭವಾಗುತ್ತಿದ್ದು, ಕೊರೊನಾ ಸೋಂಕಿತರು ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ ಎಂದು ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ತಿಳಿಸಿದರು.

ಒಂದು ಕೋಟಿ ರೂ. ವೆಚ್ಚದ ಆಕ್ಸಿಜನ್ ಉತ್ಪಾದನಾ ಘಟಕ ತಾಲ್ಲೂಕಿಗೆ ಮಂಜೂರಾಗಿದ್ದು, ಸರ್ಕಾರಿ ಆಸ್ಪತ್ರೆಯ ಆವರಣದಲ್ಲಿ ಇಂದು ಭೂಮಿ ಪೂಜೆ ನೆರವೇರಿಸ ಲಾಯಿತು.

ನಂತರ ಮಾತನಾಡಿದ ಶಾಸಕರು, ತಾಲ್ಲೂಕು ಆಸ್ಪತ್ರೆಯಲ್ಲಿ ಕೇವಲ 17 ಸಿಲಿಂಡರ್ ಮಾತ್ರ ಇದ್ದು, ಇದೀಗ ಅವುಗಳನ್ನು 70ಕ್ಕೆ ಏರಿಕೆ ಮಾಡಲಾಗಿದೆ ಎಂದು ಹೇಳಿದರು.

ಕೆಆರ್‌ಐಡಿಎಲ್ ಅಧ್ಯಕ್ಷ ರುದ್ರೇಶ್, ಹೊನ್ನಾಳಿಯಲ್ಲಿ ಕೆಆರ್‌ಐಡಿಎಲ್ ನಿಂದ ಸಿಎಸ್‌ಆರ್ ಫಂಡ್ ಬಳಸಿಕೊಂಡು ಆಕ್ಸಿಜನ್ ಉತ್ಪಾದನಾ ಘಟಕವನ್ನು ಸ್ಥಾಪಿಸಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಕೆಆರ್‌ಐಡಿಎಲ್ ಎಂ.ಡಿ. ಗಂಗಾಧರ್ ಸ್ವಾಮಿ, ಟ್ರೈಯಿನ್ ಹೆಲ್ತ್ ಕೇರ್ ಲಿ. ಬೆಂಗಳೂರಿನ ಮುಖ್ಯಸ್ಥ ಡಾ. ಪ್ರಶಾಂತ್, ಅಧೀಕ್ಷಕ ಅಭಿಯಂತರ ರಾಜಣ್ಣ, ಕಾರ್ಯಪಾಲಕ ವಿಶ್ವನಾಥ್, ಎಇಇ ಕೆಂಚಪ್ಪ, ಡಾ. ಸುದೀಪ್, ಡಾ.ಸಂತೋಷ್, ಡಾ. ಲೀಲಾವತಿ, ಎಸ್‌ಐ ಬಸವನಗೌಡ ಬಿರಾದಾರ್, ಪುರಸಭಾಧ್ಯಕ್ಷ ಕೆ.ವಿ. ಶ್ರೀಧರ್ ಇನ್ನಿತರರಿದ್ದರು.

## ಖಾಸಗಿ ಆಂಬ್ಯುಲೆನ್ಸ್ ಸೇವೆಗೆ ದರ ನಿಗದಿ

ಬೆಂಗಳೂರು, ಮೇ 21 – ಖಾಸಗಿ ಆಂಬ್ಯುಲೆನ್ಸ್ ಸೇವೆಗಳಿಗೆ ದರ ನಿಗದಿ ಪಡಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಕೊರೊನಾ ಸಂದರ್ಭದಲ್ಲಿ ಆಂಬ್ಯುಲೆನ್ಸ್‌ಗಳು ಅತಿಯಾಗಿ ಹಣ ವಸೂಲಿ ಮಾಡುತ್ತಿರುವ ಆರೋಪ ಕೇಳಿ ಬಂದ ನಂತರ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಹತ್ತು ಕಿ.ಮೀ.ವರೆಗೆ ತೆರಳಲು ರೋಗಿಗಳ ಸಾಗಣೆಯ ಆಂಬುಲೆನ್ಸ್ ದರ 1,500 ರೂ.ಗಳಾಗಿದೆ. ನಂತರದಲ್ಲಿ ಪ್ರತಿ ಕಿ.ಮೀ.ಗೆ 120 ರೂ. ಪಾವತಿಸಬೇಕಿದೆ. ಕಾಯುವ ದರ ಗಂಟೆಗೆ 200 ರೂ.ಗಳೆಂದು ನಿಗದಿ ಪಡಿಸಲಾಗಿದೆ.

ಲೈಫ್ ಸಪೋರ್ಟ್ ಇರುವ ಆಂಬ್ಯುಲೆನ್ಸ್ ಸೇವಾ ದರ ಪ್ರತಿ ಹತ್ತು ಕಿ.ಮೀ.ಗೆ 2,000 ರೂ. ಹಾಗೂ ನಂತರದಲ್ಲಿ ಪ್ರತಿ ಕಿ.ಮೀ.ಗೆ 120 ರೂ. ಆಗಿದೆ. ಕಾಯುವ ದರ ಗಂಟೆಗೆ 250 ರೂ. ಎಂದು ನಿಗದಿ ಪಡಿಸಲಾಗಿದೆ.


ಭಾವಪೂರ್ಣ ಶ್ರದ್ಧಾಂಜಲಿ



ದಿ : 21-5-2021ರಂದು ನಿಧನರಾದ

ಶ್ರೀ ಜೆ.ಎಸ್ ಜ್ಯೋತಿ,

ನಿವೃತ್ತ ಪ್ರಾಂಶುಪಾಲರು, ನಳಂದ ಜ್ಯೂನಿಯರ್ ಕಾಲೇಜ್, ಜಗಳೂರು ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

- ಟಿ.ಗುರುಸಿದ್ದನಗೌಡ, ಮಾಜಿ ಶಾಸಕರು
- ಆರೈಕೆ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್
- ಆರೈಕೆ ಆಗ್ರೋ ಫುಡ್ ಪ್ರೊಸೆಸಿಂಗ್
- ಶೈಲಾ ಸ್ಟೀಲ್ ಅಂಡ್ ಸಿಮೆಂಟ್
- ಸಾಯಿ ಎಂಟರ್ ಪ್ರೈಸಸ್
- ಹರ್ಷಿತಾ ಸ್ಟೀಲ್ ಅಂಡ್ ಸಿಮೆಂಟ್


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte